State, which has a rich diversity of flora and fauna, local traditions and culture. Addressing the joint session of the Karnataka Legislature has always given me a great satisfaction and pleasure. Through the Hon'ble Members of this House, I convey my appreciation of the diligent, talented and enlightened people of this State.

67. Let me conclude my speech by wishing members of both the Houses every success in their deliberation.

Jai Karnataka, Jai Hind.

ಸದನವು 12 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನ : 15 ನಿಮಿಷಗಳ ನಂತರ ಸಭೆ ಸೇರಲು ನಿಶ್ಚಯಿಸಿತು)

(ಸಭೆಯು 12-40ಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಸಭಾಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

(2) ರಾಜ್ಯಪಾಲರ ಭಾಷಣದ ಮುಂದನೆ

ಅಧ್ಯಕ್ಷರು :— ಸನ್ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವುದು.

ಕಾರ್ಯದರ್ಶಿ :— ಮಾನ್ಯ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಸಭೆಯ ಮುಂದಿಡುತ್ತೇನೆ.

ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡದ ಭಾಷಾಂತರ.

ಮಾನ್ಯ ರಾಜ್ಯಪಾಲರು :— ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ನಾನು ತಮ್ಮೆಲ್ಲರನ್ನೂ ಅತ್ಯಂತ ಸಂತೋಷದಿಂದ ಸ್ವಾಗತಿಸುತ್ತೇನೆ. ಇದು ಪ್ರಸಕ್ತ ವರ್ಷದ ಮೊದಲನೇ ಅಧಿವೇಶನವಾಗಿರುವುದರಿಂದ ನಾನು ತಮ್ಮೆಲ್ಲರಿಗೆ ಮತ್ತು ಕರ್ನಾಟಕದ ಜನತೆಗೆ ಹೊಸ ವರ್ಷವು ಸಂತಸ ಹಾಗೂ ಸಮೃದ್ಧಿಯನ್ನು ತರಲೆಂದು ಹಾರೈಸುತ್ತೇನೆ. 1999 ಒಂದು ವಿಶೇಷವಾದ ವರ್ಷ; ಅದು ನೂತನ ಸಹಸ್ರಮಾನದ ಹೊಸ್ತಿಲಲ್ಲಿ ನಿಂತಿದೆ.

2. ನೂತನ ಸಹಸ್ರಮಾನವು ಸದಾ ಪರಿವರ್ತನೆ ಹಾಗೂ ಪ್ರಗತಿಯ ನಿರೀಕ್ಷೆಯನ್ನು ಮೂಡಿಸುತ್ತದೆ. ಈ ನೂತನ ಸಹಸ್ರಮಾನವು ನಮ್ಮ ರಾಷ್ಟ್ರದ ವೈಜ್ಞಾನಿಕ, ಸಾಂಸ್ಕೃತಿಕ, ತಾಂತ್ರಿಕ ಮತ್ತು ಸಾಮಾಜಿಕ-ಆರ್ಥಿಕ ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸುತ್ತದೆಂದು ನಾವು ನಿರೀಕ್ಷಿಸುತ್ತೇವೆ. ಈ ಪ್ರಗತಿಯನ್ನು ಸಾಧಿಸುವ ದಿಶೆಯಲ್ಲಿ ಮಾಹಿತಿ ತಂತ್ರಜ್ಞಾನವು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಲಿದೆ.

3. ಮಾಹಿತಿ ತಂತ್ರಜ್ಞಾನದ ಪರಿಣಾಮಗಳನ್ನು ಪೂರ್ಣವಾಗಿ ಗಮನದಲ್ಲಿಟ್ಟುಕೊಂಡು ಜನತೆಗೆ ದಕ್ಷ ಆಡಳಿತವನ್ನು ಮತ್ತು ಸಾಮಾಜಿಕ ವಲಯದ ಎಲ್ಲ ಕ್ಷೇತ್ರಗಳಲ್ಲಿ ತ್ವರಿತ ಸೇವೆಯನ್ನು ಒದಗಿಸುವಂತೆ ಮಾಡಲು ರಾಜ್ಯ, ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳ ಆಡಳಿತದಲ್ಲಿ ತಂತ್ರಜ್ಞಾನದ ಬಳಕೆಯನ್ನು ಹೆಚ್ಚಿಸಲು ನನ್ನ ಸರ್ಕಾರವು ಕ್ರಮಗಳನ್ನು ಕೈಗೊಂಡಿದೆ. ಮೂಲಭೂತ ಸಾಮಾಜಿಕ ಅವಶ್ಯಕತೆಗಳನ್ನು ಅತ್ಯಂತ ಆದ್ಯತೆಯ ಮೇಲೆ ಒದಗಿಸಲು ನನ್ನ ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡಿದೆ. ಈ ಪ್ರಯತ್ನಗಳಿಂದ, ಸಮಾಜದ ವಂಚಿತ ಜನರು ಇತರರ ಮಟ್ಟಕ್ಕೆ ಬರುತ್ತಾರಲ್ಲದೆ ಹೊಸ ಯುಗವನ್ನು ಸಮರ್ಥವಾಗಿ ಮತ್ತು ದೃಢಸಂಕಲ್ಪದಿಂದ ಎದುರಿಸಲು ಸಶಕ್ತರಾಗುತ್ತಾರೆ.

4. ಸಮಾಜದ ದುರ್ಬಲ ವರ್ಗದ ಪ್ರಯೋಜನಕ್ಕಾಗಿ ಬೃಹತ್ ಪ್ರಮಾಣದಲ್ಲಿ ವಸತಿ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ ಎಂಬುದು ಈ ಸರ್ಕಾರವು ಅಧಿಕಾರಕ್ಕೆ ಬರುವ ಸಂದರ್ಭದಲ್ಲಿ ಜನತೆಗೆ ನೀಡಿದ್ದ ಪ್ರಮುಖ ಆಶ್ವಾಸನೆಗಳಲ್ಲಿ ಒಂದಾಗಿತ್ತು ಎಂಬ ಅಂಶವನ್ನು ಮಾನ್ಯ ಸದಸ್ಯರಿಗೆ ನೆನಪು ಮಾಡಿಕೊಡಬಯಸುತ್ತೇನೆ. ಕಳೆದ ನಾಲ್ಕು ವರ್ಷಗಳಲ್ಲಿ ಸುಮಾರು ನಾಲ್ಕು ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಈ ವರ್ಷದಲ್ಲಿ ಮತ್ತೆ ಒಂದು ಲಕ್ಷ ಮನೆಗಳ ನಿರ್ಮಾಣವನ್ನು ಪೂರ್ಣಗೊಳಿಸಲು ನನ್ನ ಸರ್ಕಾರವು ಬದ್ಧವಾಗಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತಿದೆ.

5. ಶಿಕ್ಷಣವು ಪ್ರಗತಿಯ ಚಾಲಕ ಶಕ್ತಿಯಾಗಿದೆ ಎಂಬ ಅಂಶವನ್ನು ಗಮನಿಸಿ ನಮ್ಮ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದೇವೆ. ಈ ಕಾರ್ಯನೀತಿಯ ಅನುಸಾರವಾಗಿ ಈ ವರ್ಷ ಇನ್ನೂರ ಹದಿನೇಳು ನೂತನ ಸರ್ಕಾರಿ ಪ್ರೌಢಶಾಲೆಗಳನ್ನು ಮಂಜೂರು ಮಾಡಲಾಗಿದೆ ಮತ್ತು 28,986 ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಕಳೆದ 4 ವರ್ಷಗಳಲ್ಲಿ 72,373 ಮಂದಿ ಶಾಲಾ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದ್ದು, ಇದು ಸಾರ್ವಕಾಲಿಕ ದಾಖಲೆಯಾಗಿದೆ. ಶಿಕ್ಷಕರ ಸಂಖ್ಯೆಯನ್ನು ಹೆಚ್ಚಿಸುವುದರ ಜೊತೆಗೆ ಶಾಲೆಗಳಲ್ಲಿ ಬೋಧನೆಯ ಗುಣಮಟ್ಟವನ್ನು ಸುಧಾರಣೆ ಮಾಡುವ ಬಗ್ಗೆ ಈಗ ನಮ್ಮ ಗಮನವನ್ನು ಕೇಂದ್ರೀಕರಿಸಿದ್ದೇವೆ. 1999-2000ದ ಸಾಲಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಸುಮಾರು ಒಂದು

ಲಕ್ಷ ಶಿಕ್ಷಕರುಗಳಿಗೆ ಸೂಕ್ತ ತರಬೇತಿ ನೀಡಲಾಗುವುದು. ಅಲ್ಲದೆ, ಈ ವರ್ಷದಲ್ಲಿ 4,742 ಶಾಲಾ ಕೊಠಡಿಗಳ ನಿರ್ಮಾಣವನ್ನು ಪೂರ್ಣಗೊಳಿಸಿದ್ದು, ಕಳೆದ 4 ವರ್ಷಗಳಲ್ಲಿ 25,791 ಶಾಲಾ ಕೊಠಡಿಗಳನ್ನು ನಿರ್ಮಿಸಲಾಗಿದೆ. ಇದೂ ಕೂಡ ಒಂದು ದಾಖಲೆಯೇ ಆಗಿದೆ. ಈಗಿರುವ ಶಾಲಾ ಕೊಠಡಿಗಳ ಸೂಕ್ತ ನಿರ್ವಹಣೆಯ ಅಗತ್ಯತೆಯನ್ನು ಮನಗಂಡು 1998-99 ರಲ್ಲಿ ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿ ಮತ್ತು ನಿರ್ವಹಣೆಗಾಗಿ 6 ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ.

6. ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆಯನ್ನು ಬೆಂಗಳೂರು, ಮೈಸೂರು ಹಾಗೂ ಬೆಳಗಾವಿ ವಿಭಾಗಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈವರೆಗೆ 126 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. 1998ರ ನವೆಂಬರ್‌ನಲ್ಲಿ ರಾಜ್ಯಕ್ಕೆ ಭೇಟಿ ನೀಡಿದ್ದ ವಿಶ್ವಬ್ಯಾಂಕ್ ತಂಡವು ಆಸ್ಪತ್ರೆಗಳ ನಿರ್ಮಾಣ, ಉಪಕರಣಗಳ ಖರೀದಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಸಂಬಂದಿಸಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದೆ. ಈ ಯೋಜನೆಯು ಪೂರ್ಣಗೊಂಡಾಗ, ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಇರುವ 201 ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದಂತಾಗುತ್ತದೆ ಮತ್ತು ಜನರಿಗೆ ಆಧುನಿಕ ಹಾಗೂ ಉನ್ನತ ಗುಣಮಟ್ಟದ ಸೇವೆಗಳನ್ನು ಒದಗಿಸಲು ಸಾಧ್ಯವಾಗುತ್ತದೆ. ಇದೇ ರೀತಿ ಜರ್ಮನ್ ಸರ್ಕಾರದ ನೆರವಿನೊಂದಿಗೆ ಗುಲ್ಬರ್ಗಾ ವಿಭಾಗದಲ್ಲಿ 80 ಕೋಟಿ ರೂ. ಯೋಜನಾ ವೆಚ್ಚದಲ್ಲಿ ಕೆ.ಎಫ್.ಡಬ್ಲ್ಯೂ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು ಈ ಯೋಜನೆಯನ್ನು ಎರಡು ಹಂತಗಳಲ್ಲಿ ಕೈಗೊಳ್ಳಲಾಗುವುದು. 51 ಆಸ್ಪತ್ರೆಗಳ ಪೈಕಿ 23 ಆಸ್ಪತ್ರೆಗಳ ಕಾಮಗಾರಿಯು 1999ರ ಜೂನ್ ತಿಂಗಳಿಂದ ಆರಂಭವಾಗುತ್ತದೆ. ಎಲ್ಲಾ ವಿಧಿ-ವಿಧಾನಗಳು ಪೂರ್ಣಗೊಂಡಿರುವುದರಿಂದ ಈ ಆಸ್ಪತ್ರೆಗಳಿಗೆ ಬೇಕಾಗುವ ಸಲಕರಣೆಗಳನ್ನು ಖರೀದಿಸುವ ಕಾರ್ಯವನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದು.

7. ಬೆಂಗಳೂರು ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಿಶ್ವಬ್ಯಾಂಕ್ ನೆರವಿನ ಭಾರತ ಜನಸಂಖ್ಯಾ ಯೋಜನೆ-8ನ್ನು ಕಾರ್ಯಗತಗೊಳಿಸಲಾಗುತ್ತಿದೆ. ಇದೇ ರೀತಿಯ ಕಾರ್ಯಚಟುವಟಿಕೆಗಳನ್ನು ಇನ್ನೂ 11 ನಗರಗಳು ಹಾಗೂ ಪಟ್ಟಣಗಳಿಗೆ ವಿಸ್ತರಿಸಲು ಭಾರತ ಸರ್ಕಾರ ಮತ್ತು ವಿಶ್ವ ಬ್ಯಾಂಕ್ ಒಪ್ಪಿಕೊಂಡಿದೆ. ಇದಕ್ಕೆ ಸುಮಾರು 26 ಕೋಟಿ ರೂಪಾಯಿಗಳ ಬಂಡವಾಳ ಬೇಕಾಗುತ್ತದೆ. ಇದರಿಂದ ಈ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳಿಗೆ ಅಗತ್ಯವಾದ ಮೂಲ ಸೌಲಭ್ಯಗಳನ್ನು ಬಲಪಡಿಸದಂತಾಗುತ್ತದೆ.

8. ಶ್ರೀ ಜಯದೇವ ಹೃದ್ರೋಗ ಸಂಸ್ಥೆಯ ಹೊಸ ಆಸ್ಪತ್ರೆ ಸಮುಚ್ಚಯದ ಉಳಿದ ಕಾಮಗಾರಿಗಳನ್ನು ಪೂರ್ಣಗೊಳಿಸುವ ಹಾಗೂ ಅದನ್ನು ಸಂಪೂರ್ಣವಾಗಿ ಸಜ್ಜುಗೊಳಿಸುವ ಸಲುವಾಗಿ ನನ್ನ ಸರ್ಕಾರವು 32 ಕೋಟಿ ರೂ.ಸಾಲದ ನೆರವಿಗಾಗಿ ಹುಡ್ಕೊದೊಂದಿಗೆ

ನಡೆಸಿದ ಮಾತುಕತೆ ಫಲಪ್ರದವಾಗಿದೆ. ಈ ಹೊಸ ಆಸ್ಪತ್ರೆಯು 1999ನೇ ವರ್ಷದಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆಯಿದ್ದು, ಇದರಿಂದ ರಾಜ್ಯದ ಜನತೆಗೆ ಉನ್ನತ ತಂತ್ರಜ್ಞಾನದ ಸೌಲಭ್ಯಗಳು ದೊರೆಯಲಿವೆ.

9. ನನ್ನ ಸರ್ಕಾರವು ಕಳೆದ ಕೆಲವು ವರ್ಷಗಳಿಂದಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನೇರವಾಗಿ ಪ್ರಯೋಜನವಾಗುವಂಥ ಮತ್ತು ಅವರ ಜೀವನಮಟ್ಟದಲ್ಲಿ ಸಾಕಷ್ಟು ಸುಧಾರಣೆಯನ್ನು ತರುವಂಥ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತು ನೀಡಿದೆ. ಶಿಕ್ಷಣ, ವಸತಿ ಮತ್ತು ನೀರಾವರಿ-ಇವುಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿದೆ.

10. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ವಿದ್ಯಾಭ್ಯಾಸಕ್ಕೆ ನೀಡಲಾದ ಸೌಲಭ್ಯಗಳಿಂದ ಅವರ ಬದುಕಿನಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ವೃತ್ತಿಪರ ಹಾಗೂ ಸಾಮಾನ್ಯ ಕೋರ್ಸುಗಳೆರಡರಲ್ಲೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಾಲಕರು ಮತ್ತು ಬಾಲಕಿಯರು ಇನ್ನೂ ಹೆಚ್ಚಿನ ಶೈಕ್ಷಣಿಕ ಸಾಧನೆಗಳನ್ನು ಮಾಡುವುದಕ್ಕೆ ಪ್ರೋತ್ಸಾಹಿಸುವ ದೃಷ್ಟಿಯಿಂದ ಇದೇ ಮೊದಲ ಬಾರಿಗೆ 5 ಪ್ರತಿಭಾವಂತ ವಿದ್ಯಾರ್ಥಿಗಳನ್ನು ಉನ್ನತ ವ್ಯಾಸಂಗಕ್ಕೆ ವಿದೇಶಕ್ಕೆ ಕಳುಹಿಸಿಕೊಡಲು ನನ್ನ ಸರ್ಕಾರವು ಉದ್ದೇಶಿಸಿದೆ. ಕೇಂದ್ರ ಲೋಕಸೇವಾ ಆಯೋಗ ಮತ್ತು ಕರ್ನಾಟಕ ಲೋಕಸೇವಾ ಆಯೋಗಗಳು ನಡೆಸುವ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪ್ರತಿಭಾವಂತ ಬಾಲಕರು ಮತ್ತು ಬಾಲಕಿಯರಿಗೆ ತರಬೇತಿ ನೀಡುವ ಸಲುವಾಗಿ ಸಿವಿಲ್ ಸೇವಾ ವ್ಯಾಸಂಗ ವೃಂದವೊಂದನ್ನು ಪ್ರಾರಂಭಿಸುತ್ತಿದ್ದೇವೆ. ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣದ ಚಾಲ್ತಿ ಕಾರ್ಯಕ್ರಮಗಳನ್ನು ಮುಂದುವರಿಸುವ ಮೂಲಕ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ನಮ್ಮ ಪ್ರಯತ್ನಗಳನ್ನು ನಡೆಸಿಕೊಂಡು ಹೋಗುತ್ತೇವೆ. ಕಳೆದ ನಾಲ್ಕು ವರ್ಷಗಳಲ್ಲಿ ಇನ್ನೂರ ಮೂವತ್ತೊಂಭತ್ತು ವಿದ್ಯಾರ್ಥಿನಿಲಯಗಳನ್ನು ನನ್ನ ಸರ್ಕಾರ ನಿರ್ಮಿಸಿದೆ ಎಂಬುದನ್ನು ತಿಳಿಸಲು ನನಗೆ ಸಂತೋಷವಾಗುತ್ತದೆ. 7ನೇ ತರಗತಿಗೆ ಈಗ ಪಬ್ಲಿಕ್ ಪರೀಕ್ಷೆ ನಡೆಸುತ್ತಿರುವ ಅಂಶವನ್ನು ಗಮನದಲ್ಲಿಟ್ಟುಕೊಂಡು ಆ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಯನ್ನು ನೀಡಲಾಗುತ್ತಿದೆ.

11. ನವಚೇತನ ಯೋಜನೆಯು, ಕ್ಷ-ಕಿರಣ ತಂತ್ರಜ್ಞಾನ, ಶಸ್ತ್ರಚಿಕಿತ್ಸಾ ಕೊಠಡಿ ತಂತ್ರಜ್ಞಾನ ಮತ್ತು ಡಯಾಲಿಸಿಸ್ ತಂತ್ರಜ್ಞಾನದಂಥ ಸೇವಾ ವಲಯದ ಕೆಲವು ಹೊಸ ಕಾರ್ಯ ಚಟುವಟಿಕೆಗಳಿಗೆ ವಿಶೇಷ ಗಮನ ನೀಡುತ್ತದೆ. ಇದರಿಂದಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಸಾಕಷ್ಟು ಉದ್ಯೋಗಾವಕಾಶಗಳು ದೊರೆಯುತ್ತವೆ.

12. ಭೂಮಿಗಳ ಇಳುವರಿ ಹೆಚ್ಚಿಸುವ ಸಲುವಾಗಿ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಜಮೀನುಗಳಿಗೆ ನೀರಾವರಿ ಸೌಲಭ್ಯ ಒದಗಿಸುವ ಕಾರ್ಯವನ್ನು ತೀವ್ರಗೊಳಿಸಲಾಗುವುದು. 23,000 ಎಕರೆಗಿಂತಲೂ ಹೆಚ್ಚಿನ ಜಮೀನನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡಿಸಲಾಗಿದೆ. ಜಮೀನು ಖರೀದಿ ಯೋಜನೆಗೆ ಸಹಾ ಫಲಾನುಭವಿಗಳಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ.

13. ಸ್ಪಂದನಶೀಲ ಹಾಗೂ ಬೆಳವಣಿಗೆ ಆಧಾರಿತ ಗ್ರಾಮೀಣ ಅರ್ಥ ವ್ಯವಸ್ಥೆ ಸಾರ್ಥಕವಾಗಬೇಕಾದರೆ ರಾಜ್ಯದ ಅಭಿವೃದ್ಧಿ ಪ್ರಯತ್ನಗಳಲ್ಲಿ ಜನರು ಹೆಚ್ಚು ಹೆಚ್ಚಾಗಿ ಪಾಲ್ಗೊಳ್ಳಬೇಕು. ಇದನ್ನು ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಸಾಧಿಸಲಾಗಿದೆ. ಹೊಸದಾಗಿ ರಚಿತವಾದ ಎಲ್ಲ 7 ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯತಿಗಳನ್ನು ಸ್ಥಾಪಿಸಲಾಗಿದೆ.

14. ಗ್ರಾಮ ಪಂಚಾಯತಿಗಳು ಗ್ರಾಮ ಮಟ್ಟದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಮತ್ತು ಜೀವಂತಿಕೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವ ದೃಷ್ಟಿಯಿಂದ ಈಗಿರುವ ಗ್ರಾಮ ಪಂಚಾಯತಿಗಳನ್ನು ಪುನರ್ ರಚಿಸುವ ಸಲುವಾಗಿ ರಾಜ್ಯ ಸರ್ಕಾರವು ಒಂದು ಆಧ್ಯಾದೇಶದ ಮೂಲಕ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಇತ್ತೀಚೆಗೆ ತಿದ್ದುಪಡಿ ಮಾಡಿದೆ. 1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ರಾಜ್ಯದಲ್ಲಿ ಸ್ಥಾಪಿಸಲಾದ ಗ್ರಾಮ ಪಂಚಾಯತಿಗಳ ವ್ಯಾಪ್ತಿ ಕಡಿಮೆಯಾದುದರಿಂದ ಮತ್ತು ಅವುಗಳು ಸಂಗ್ರಹಿಸುವಂಥ ಸಂಪನ್ಮೂಲಗಳ ಪ್ರಮಾಣ ಸೀಮಿತವಾದದ್ದರಿಂದ ಅವುಗಳಲ್ಲಿ ಹೆಚ್ಚಿನವು ಕ್ರಿಯಾಶೀಲ ಸ್ವಯಂ ಆಡಳಿತ ಸಂಸ್ಥೆಗಳಾಗಿ ಬೆಳೆಯುವಲ್ಲಿ ವಿಫಲಗೊಂಡಿವೆ. 1987-92ರ ಅವಧಿಯಲ್ಲಿ ಇದ್ದ ಮಂಡಲ ಪಂಚಾಯತಿಗಳಂಥ ದೊಡ್ಡ ಸಂಸ್ಥೆಗಳಿಂದ ರಾಜ್ಯಕ್ಕೆ ದೊರೆತ ಯಶಸ್ಸಿನ ಅನುಭವದ ಹಿನ್ನೆಲೆಯಲ್ಲಿ ದೊಡ್ಡ ಪಂಚಾಯತಿಗಳನ್ನೇ ಮತ್ತೆ ಅಸ್ತಿತ್ವಕ್ಕೆ ತರುವುದು ಅನುಕೂಲಕರ ಎಂದು ಭಾವಿಸಲಾಗಿದೆ. ಈ ಸಂಸ್ಥೆಗಳ ಪುನರ್ ರಚನೆಯ ಕಾರ್ಯ ಮುಗಿದ ನಂತರ ಹೊಸ ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಕೆಲಸ-ಕಾರ್ಯಗಳನ್ನು ವಹಿಸಿಕೊಡುವ ಹಾಗೂ ಹೆಚ್ಚಿನ ಹಣಕಾಸನ್ನು ಒದಗಿಸುವ ಬಗ್ಗೆ ಸಹ ರಾಜ್ಯವು ಪರಿಶೀಲಿಸುತ್ತದೆ.

15. ವಿಶ್ವಬ್ಯಾಂಕ್ ನೆರವಿನ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯಡಿಯಲ್ಲಿ 1000ಕ್ಕೂ ಹೆಚ್ಚು ಗ್ರಾಮಗಳಿಗೆ ನೀರು ಪೂರೈಸುವ ಯೋಜನೆಗಳನ್ನು 447 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈವರೆಗೆ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಈ ಯೋಜನೆಗಳು 1999ನೇ ವರ್ಷ ಮುಗಿಯುವುದರೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ನೆದರ್‌ಲ್ಯಾಂಡ್

ಸರ್ಕಾರದ ನೆರವಿನ ಒಂದು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆಯನ್ನು ಸಹ ಧಾರವಾಡ, ಹಾವೇರಿ, ಗದಗ, ಬಿಜಾಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಗೆ 85 ಕೋಟಿ ರೂಪಾಯಿಗಳನ್ನು ನಿಗದಿಪಡಿಸಿದ್ದು, 1999ರ ಡಿಸೆಂಬರ್ ವೇಳೆಗೆ ಮುಗಿಸುವ ಗುರಿ ಇಟ್ಟುಕೊಳ್ಳಲಾಗಿದೆ.

16. ಅಲ್ಪ ಸಂಖ್ಯಾತರ ಕ್ಷೇಮಾಭಿವೃದ್ಧಿ ಮತ್ತು ಏಳಿಗೆಗಾಗಿ ಪ್ರತ್ಯೇಕ ನಿರ್ದೇಶನಾಲಯವೊಂದನ್ನು ರಚಿಸಲಾಗಿದ್ದು, ಆ ನಿರ್ದೇಶನಾಲಯವು ಅಲ್ಪ ಸಂಖ್ಯಾತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ನಿರ್ದಿಷ್ಟವಾಗಿ ಗಮನಹರಿಸುತ್ತದೆ. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು 1999-2000ನೇ ಸಾಲಿನಲ್ಲಿ ಸುಮಾರು 18,000 ವ್ಯಕ್ತಿಗಳಿಗೆ ನೆರವು ನೀಡುತ್ತದೆ ಮತ್ತು ಹಿಂದುಳಿದ ವರ್ಗದವರ ಅಂದಾಜು 2000 ಎಕರೆ ಜಮೀನಿಗೆ ನೀರಾವರಿ ಸೌಲಭ್ಯವನ್ನು ಸಹಾ ಕಲ್ಪಿಸುತ್ತದೆ.

17. ಮಹಿಳೆಯರಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು "ಯಶಸ್ವಿನಿ" ಎಂಬ ಒಂದು ವಿಶಿಷ್ಟ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ಈ ಯೋಜನೆಯು, ಇತರ ವಿಷಯಗಳ ಜೊತೆಗೆ, ಉದ್ಯಮ ಸಂಬಂಧಿ ತರಬೇತಿ, ಕೌಶಲ್ಯ ಸುಧಾರಣೆ, ತಂತ್ರಜ್ಞಾನ ವರ್ಗಾವಣೆ, ಪ್ರಾರಂಭಿಕ ಬಂಡವಾಳ, ವ್ಯವಸ್ಥಾಪನಾ ನೆರವು, ಮಾರಾಟ ನೆರವು, ಇವೇ ಮುಂತಾದವುಗಳಿಗೆ ಒತ್ತು ನೀಡುತ್ತದೆ.

18. ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮವು ಚಿತ್ರದುರ್ಗ, ತುಮಕೂರು, ಬಳ್ಳಾರಿ ಮತ್ತು ಕೋಲಾರ ಜಿಲ್ಲೆಗಳಲ್ಲಿ ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿ ಮತ್ತು ಅವರನ್ನು ಸಶಕ್ತಗೊಳಿಸುವ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಈ ಯೋಜನೆಗೆ ಅಂತರರಾಷ್ಟ್ರೀಯ ಕೃಷಿ ಅಭಿವೃದ್ಧಿ ನಿಧಿ ಮತ್ತು ವಿಶ್ವ ಬ್ಯಾಂಕ್ ಹಣಕಾಸು ನೆರವು ನೀಡುತ್ತಿವೆ. 31 ಕೋಟಿ ರೂಪಾಯಿ ಅಂದಾಜು ವೆಚ್ಚದ ಈ ಯೋಜನೆಯಿಂದ ಸ್ವ-ಸಹಾಯ ತಂಡಗಳ ರಚನೆ, ಕೌಶಲ್ಯ ತರಬೇತಿ, ಭೂ ಅಭಿವೃದ್ಧಿ ಮತ್ತು ಆದಾಯಗಳಿಕೆ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ 5 ವರ್ಷಗಳ ಅವಧಿಯಲ್ಲಿ 24,000 ಗ್ರಾಮೀಣ ಬಡ ಮಹಿಳೆಯರಿಗೆ ಪ್ರಯೋಜನ ಒದಗಿಸುವ ನಿರೀಕ್ಷೆಯಿದೆ.

19. ಭಾರತ ಸರ್ಕಾರವು ಕೇವಲ 28.75 ಲಕ್ಷ ಕುಟುಂಬಗಳಿಗೆ ಮಾತ್ರ ರಿಯಾಯಿತಿ ದರದಲ್ಲಿ ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದರೂ, ಆರ್ಥಿಕವಾಗಿ ವಂಚಿತರಾದ ರಾಜ್ಯದ ಅರವತ್ತಾರು ಲಕ್ಷ ಬಡ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸಬೇಕಾದ ಅಗತ್ಯವನ್ನು ಮನಗಂಡ ನನ್ನ ಸರ್ಕಾರವು ನಿರ್ದಿಷ್ಟ ಗುರಿಯ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿಯಲ್ಲಿ ಅದೇ ರಿಯಾಯಿತಿ ದರದಲ್ಲಿ ಅವರಿಗೆ ಆಹಾರ ಧಾನ್ಯಗಳನ್ನು ವಿತರಿಸುತ್ತಿದೆ. ಇದಕ್ಕಾಗಿ, ನನ್ನ ಸರ್ಕಾರವು ಒಂದು ವರ್ಷಕ್ಕೆ 300 ಕೋಟಿ ರೂಪಾಯಿಗಳ

ಸಬ್ಸಿಡಿ ಒದಗಿಸುತ್ತಿದೆ. ವಿತರಣಾವೆಚ್ಚವನ್ನು ಸಹ ಬಡವರ ಮೇಲೆ ಹೇರದೆ ಅದನ್ನೂ ಈ ಸಬ್ಸಿಡಿ ಮೂಲಕವೇ ಭರಿಸಲಾಗುತ್ತಿದೆ. ಈ ವರ್ಷ ನನ್ನ ಸರ್ಕಾರವು, ಇಲ್ಲಿಯವರೆಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಹೊರಗುಳಿದಿದ್ದ 6.22 ಲಕ್ಷ ಅರ್ಹ ಬಡ ಕುಟುಂಬಗಳಿಗೆ ಹಸಿರು ಕಾರ್ಡುಗಳನ್ನು ನೀಡಿದೆ.

20. ಫಾರಂ ನಂಬರ್ 7ನ್ನು ಇಲ್ಲಿಯವರೆಗೂ ಸಲ್ಲಿಸದಿರುವ ಗೇಣಿದಾರರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಕರ್ನಾಟಕ ಭೂ-ಸುಧಾರಣಾ ಅಧಿನಿಯಮದ 77ನೇ ಪ್ರಕರಣವನ್ನು ತಿದ್ದುಪಡಿ ಮಾಡಲಾಗಿದೆ. ಈಗ, ಗೇಣಿದಾರರು ತಮ್ಮ ಅರ್ಜಿಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಸ್ವಾಧೀನಾನುಭೋಗದ ಹಕ್ಕನ್ನು ಪಡೆಯಬಹುದಾಗಿದೆ. ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸುವುದಕ್ಕೆ ಅರ್ಜಿಗಳನ್ನು ಸಲ್ಲಿಸುವ ಕೊನೆಯ ದಿನಾಂಕವನ್ನೂ 1999ರ ಏಪ್ರಿಲ್ 30ರ ವರೆಗೆ ವಿಸ್ತರಿಸಲಾಗಿದೆ.

21. ಈಗ ಇರುವ ಭೂ ದಾಖಲೆಗಳು ಬಹಳ ಹಳೆಯವಾಗಿವೆ. ಮರು ಮೋಜಣಿಯನ್ನು ನಡೆಸುವವರೆಗೆ ಈ ಅಮೂಲ್ಯ ದಾಖಲೆಗಳನ್ನು ಸಂರಕ್ಷಿಸುವುದಕ್ಕಾಗಿ ಒಂದು ಮೈಕ್ರೋ ಫಿಲಂ ಯೂನಿಟ್ಟನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಪ್ರತಿ ತಿಂಗಳು ಸುಮಾರು 25,000 ದಾಖಲೆಗಳ ಮೈಕ್ರೋ ಫಿಲಂ ತಯಾರಿಸಲಾಗುತ್ತಿದೆ. ಜೊತೆಗೆ, ಈ ದಾಖಲೆಗಳನ್ನು ಕಂಪ್ಯೂಟರಿಗೆ ಅಳವಡಿಸುವ ಮೂಲಕ ಸಂರಕ್ಷಿಸಲೂ ಕ್ರಮ ಕೈಗೊಳ್ಳಲಾಗಿದೆ. ಈ ಉದ್ದೇಶಕ್ಕಾಗಿ ಭಾರತ ಸರ್ಕಾರವು 5.38 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಅದರಲ್ಲಿ 2.37 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಡಾಟಾ ಎಂಟ್ರಿ ಕಾರ್ಯ ಪ್ರಗತಿಯಲ್ಲಿದೆ.

22. ರಾಜ್ಯದ ಒಟ್ಟಾರೆ ಆರ್ಥಿಕ ಅಭಿವೃದ್ಧಿಗೆ ಗ್ರಾಮೀಣ ಪ್ರದೇಶಗಳಲ್ಲಿ ನಿರಂತರವಾಗಿ ಸಂಪತ್ತು ಉತ್ಪಾದನೆಯಾಗುವುದು ಬಹಳ ಮುಖ್ಯ. ಕೃಷಿ ಮತ್ತು ತೋಟಗಾರಿಕೆ ಉತ್ಪಾದನೆಗಳ ಸತತ ಬೆಳವಣಿಗೆಯ ಮೂಲಕ ಮಾತ್ರ ಇದನ್ನು ಸಾಧಿಸಬಹುದಾಗಿದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ನೀರಾವರಿಯು ಪ್ರಮುಖ ಪಾತ್ರ ವಹಿಸುವುದೇ ಅಲ್ಲದೆ ಮಳೆ ವೈಪರೀತ್ಯದ ಸಂದರ್ಭದಲ್ಲೂ ಕೃಷಿ ಉತ್ಪಾದನೆ ಕುಸಿಯದಂತೆ ಕಾಪಾಡುತ್ತದೆ. ನನ್ನ ಸರ್ಕಾರವು ರಾಜ್ಯದಲ್ಲಿರುವ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸಲೂ ಮತ್ತು ಎಲ್ಲಾ ನದಿಗಳ ನೀರಿನ ನಮ್ಮ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳಲೂ ಬದ್ಧವಾಗಿದೆ.

23. 2000 ಇಸವಿಯ ಒಳಗೇ ಕೃಷ್ಣಾ ನದಿ ನೀರಿನ ಪೂರ್ಣ ಪಾಲನ್ನು ಬಳಸಿಕೊಳ್ಳಲು ನಮ್ಮ ರಾಜ್ಯಕ್ಕೆ ಇರುವ ಸಾಮರ್ಥ್ಯದ ಬಗ್ಗೆ ನಾಲ್ಕು ವರ್ಷಗಳ ಹಿಂದೆ ಜನ ಸಂದೇಹ ವ್ಯಕ್ತಪಡಿಸಿದ್ದರು. ಕೃಷ್ಣಾ ಭಾಗ್ಯ ಜಲನಿಗಮದ ಮೂಲಕ ಮಾರುಕಟ್ಟೆಯಿಂದ ಭಾರಿ ಸಂಪನ್ಮೂಲಗಳನ್ನು ಸಂಗ್ರಹಿಸಲು, ಸಾಕಷ್ಟು ಮಾನವ ಶಕ್ತಿಯನ್ನು ನಿಯೋಜಿಸಲು

ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಸಮರೋಪಾದಿಯಲ್ಲಿ ಕೈಗೊಳ್ಳಲು 1995ರಲ್ಲಿ ಸರ್ಕಾರವು ತೆಗೆದುಕೊಂಡ ದಿಟ್ಟ ನಿರ್ಧಾರದಿಂದಾಗಿ ಕೃಷ್ಣಾ ನೀರಿನ ನಮ್ಮ ಪಾಲನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತೇವೆ ಎಂದು ಘಂಟಾಘೋಷವಾಗಿ ಹೇಳುವ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಹಿಂದೆಂದೂ ಕಂಡರಿಯದಂತಹ ಪ್ರಯತ್ನಗಳ ಮೂಲಕ 1995-96 ರಿಂದ ಈ ತನಕ ಕೃಷ್ಣಾ ಭಾಗ್ಯ ಜಲ ನಿಗಮವು 2,110 ಕೋಟಿ ರೂಪಾಯಿಗಳನ್ನು ಸಂಗ್ರಹಿಸಿ ದಾಖಲೆಯನ್ನು ಸ್ಥಾಪಿಸಿದೆ. ಇದರಿಂದಾಗಿ ಆಲಮಟ್ಟಿ ಜಲಾಶಯದಲ್ಲಿ ನಾವು 1999ರ ಜೂನ್ ವೇಳೆಗೆ ನೀರು ಸಂಗ್ರಹಿಸಬಹುದಾದ ಹಂತವನ್ನು ತಲುಪಿದ್ದೇವೆ. ಕೃಷ್ಣಾ ಮೇಲ್ದಂಡೆ ಯೋಜನೆಯಡಿ 2.01 ಲಕ್ಷ ಎಕರೆಗಳಷ್ಟು ನೀರಾವರಿ ಸಾಮರ್ಥ್ಯವನ್ನು ಈಗಾಗಲೇ ಈ ಅವಧಿಯಲ್ಲಿ ಸೃಜಿಸಲಾಗಿದೆ.

24. ಕೃಷ್ಣಾ ಭಾಗ್ಯ ಜಲ ನಿಗಮವು ಸಂಪನ್ಮೂಲಗಳನ್ನು ಸಂಗ್ರಹಿಸುವ ಮತ್ತು ನೀರಾವರಿ ಸಾಮರ್ಥ್ಯವನ್ನು ಸೃಜಿಸುವ ನಿಟ್ಟಿನಲ್ಲಿ ಸಾಧಿಸಿದ ಯಶಸ್ಸನ್ನು ಗಮನದಲ್ಲಿಟ್ಟುಕೊಂಡು, ಅದೇ ರೀತಿಯಲ್ಲಿ ಕೃಷ್ಣಾ ನದಿ ಕಣಿವೆಯಲ್ಲಿನ ಇತರ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವುದಕ್ಕಾಗಿ "ಕರ್ನಾಟಕ ನೀರಾವರಿ ನಿಗಮ"ವನ್ನು ನಾವು ಈಗ ಸ್ಥಾಪಿಸಿದ್ದೇವೆ.

25. ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ-I ಹಂತ- III, ಮಲಪ್ರಭಾ, ಹಿರೇಹಳ್ಳ, ಘಟಪ್ರಭಾ-III ಮತ್ತು ಕಾರಂಜ ಮುಂತಾದ ಮುಂದುವರಿಯುತ್ತಿರುವ ಯೋಜನೆಗಳಿಗೆ ತ್ವರಿತ ಗತಿಯ ನೀರಾವರಿ ಪ್ರಯೋಜನ ಕಾರ್ಯಕ್ರಮದ ಅಡಿಯಲ್ಲಿ 175 ಕೋಟಿ ರೂಪಾಯಿಗಳ ಸಾಲದ ನೆರವಿಗೆ ಭಾರತ ಸರ್ಕಾರವು ಅನುಮೋದನೆ ನೀಡಿದೆ.

26. ಮಂಚನಬೆಲೆ, ಚುಳಕಿನಾಲಾ, ಅಮರಜ, ಮಾಟಿಹೊಳೆ, ಮುಲ್ಲಾಮರಿ ಕೆಳಹಂತ ಹಾಗೂ ಮಸ್ಕಿನಾಲಾ ನೀರಾವರಿ ಯೋಜನೆಗಳನ್ನು 1999ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಈ ಎಲ್ಲಾ ಯೋಜನೆಗಳಿಗೆ ನಬಾರ್ಡ್ ಹಣಕಾಸು ನೆರವು ನೀಡುತ್ತಿದೆ. ಗೋದಾವರಿ ನದಿ ಕಣಿವೆಯಲ್ಲಿನ ಪ್ರಮುಖ ನೀರಾವರಿ ಯೋಜನೆಯಾದ ಬೀದರ್ ಜಿಲ್ಲೆಯ ಕಾರಂಜ ಯೋಜನೆ ಅಡಿಯಲ್ಲಿ 19,883 ಎಕರೆಯಷ್ಟು ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

27. ಕಳೆದ ನಾಲ್ಕು ವರ್ಷಗಳಲ್ಲಿ ನನ್ನ ಸರ್ಕಾರವು ಕಾವೇರಿ ಕಣಿವೆಯಲ್ಲಿನ ನೀರಾವರಿ ಯೋಜನೆಗಳಿಗೆ 1,150 ಕೋಟಿ ರೂಪಾಯಿ ಹಣವನ್ನು ವೆಚ್ಚ ಮಾಡಿದೆ. ಇಗ್ಗಲೂರು, ಯಗಚಿ, ವರುಣಾ ನಾಲೆ, ಹೇಮಾವತಿ ಯೋಜನೆಯ ತುಮಕೂರು ಹಾಗೂ ನಾಗಮಂಗಲ ಶಾಖಾ ನಾಲೆಗಳು, ಕೆ.ಆರ್.ಎಸ್.ನ ಆಧುನೀಕರಣ ಮತ್ತು

ಕಾವೇರಿ ಕಣಿವೆಯ ಇತರ ಯೋಜನೆಗಳಿಗೆ 1998ರ ಡಿಸೆಂಬರ್ ಅಂತ್ಯದವರೆಗೆ 235 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿಲಾಗಿದೆ. ಬಜೆಟ್‌ನಲ್ಲಿ ಒದಗಿಸಲಾಗಿರುವ 330 ಕೋಟಿ ರೂಪಾಯಿಗಳನ್ನು ಈ ಹಣಕಾಸು ವರ್ಷದ ಅಂತ್ಯದೊಳಗೆ ಈ ಯೋಜನೆಗಳಿಗೆ ಪೂರ್ಣವಾಗಿ ವೆಚ್ಚ ಮಾಡಲಾಗುವುದು.

28. ರೈತರ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು, ನದಿ ಪಾತ್ರದ ನೆರೆ ರಾಜ್ಯಗಳ ನಡುವೆ ಮಾತುಕತೆಯ ಮೂಲಕವೇ ನದಿ ಜಲ ವಿವಾದಗಳನ್ನು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕೆಂಬ ನನ್ನ ಸರ್ಕಾರದ ದೃಢನಿಲುವನ್ನು, ಕಾವೇರಿ ನದಿ ಪ್ರಾಧಿಕಾರವನ್ನು ರಚಿಸುವ ಮೂಲಕ ಎತ್ತಿಹಿಡಿಯಲಾಗಿದೆ. ರಾಷ್ಟ್ರೀಯ ಜಲ ವಿವಾದಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಇಂಥ ಒಂದು ಕ್ರಮ ಇದೇ ಪ್ರಪ್ರಥಮ. ಈ ಪ್ರಾಧಿಕಾರಕ್ಕೆ ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿದ್ದು, ನದಿ ಪಾತ್ರದ ರಾಜ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿರುತ್ತಾರೆ. ಈ ಕ್ರಮದಿಂದಾಗಿ, ನದಿ ನೀರಿನ ವಿವಾದಗಳನ್ನು ಬಗೆಹರಿಸುವ ಪ್ರಯತ್ನಕ್ಕೆ ಹೊಸ ಆಯಾಮ ದೊರಕಿದಂತಾಗಿದೆ.

29. ಜಲಾನಯನ ಪ್ರದೇಶಗಳ ಅಭಿವೃದ್ಧಿಗೆ ಕಾರ್ಯಕ್ರಮದಲ್ಲಿ ಕರ್ನಾಟಕವೇ ಮೊದಲಿಗೆ ರಾಜ್ಯವಾಗಿದ್ದು, ವಿದೇಶಿ ಸಂಸ್ಥೆಗಳ ನೆರವಿನಿಂದ ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳ ಅಡಿಯಲ್ಲಿ ಹಲವಾರು ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸುತ್ತಿದೆ. ಇದರಿಂದ ರಾಜ್ಯದಲ್ಲಿ ಬೀಳುವಂಥ ಅತ್ಯಲ್ಪ ಮಳೆ ನೀರನ್ನೂ ಸಂಗ್ರಹಿಸಿಟ್ಟುಕೊಳ್ಳಲು ಹಾಗೂ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಮೇಲ್ಮಣ್ಣಿನ ಸಾರ ಮತ್ತು ತೇವಾಂಶವನ್ನು ಸಂರಕ್ಷಿಸುವುದರಿಂದ ಈ ಖುಷ್ಕಿ ಜಮೀನುಗಳ ಇಳುವರಿ ಸಾಮರ್ಥ್ಯವೂ ಹೆಚ್ಚಾಗುತ್ತದೆ.

30. ಡ್ರಂ ಸೀಡರ್ಸ್, ರೋಟವೇಟರ್ಸ್, ಟ್ರೆಂಚರ್ಸ್ ಮುಂತಾದ ಯಾಂತ್ರೀಕೃತ ಕೃಷಿ ಸಲಕರಣೆಗಳನ್ನು ಬಳಸುವ ಮೂಲಕ ಖುಷ್ಕಿ ಜಮೀನು ಹಾಗೂ ಅಚ್ಚುಕಟ್ಟು ಪ್ರದೇಶಗಳಿರಡರಲ್ಲೂ ಕೃಷಿ ಉತ್ಪಾದನೆಯನ್ನು ಇನ್ನಷ್ಟು ಹೆಚ್ಚಿಸಲು ಉದ್ದೇಶಿಸಲಾಗಿದೆ. ಆಧುನಿಕ ಕೃಷಿ ತಂತ್ರಗಳು ಹಾಗೂ ತಂತ್ರಜ್ಞಾನದ ಬಗ್ಗೆ ರೈತರ ಅರಿವನ್ನು ಹೆಚ್ಚಿಸಲು, 'ನೇಗಿಲ ಯೋಗಿ' ಯೋಜನೆಯು ಮಾಹಿತಿಯನ್ನು ರೈತರ ಮನೆ ಬಾಗಿಲಿಗೇ ಕೊಂಡೊಯ್ಯುತ್ತಿದೆ.

31. ದೇಶದ ಇತರ ಭಾಗಗಳಲ್ಲಿ ರೂಢಿಯಲ್ಲಿರುವ ತಂತ್ರಜ್ಞಾನದ ಬಗ್ಗೆ ರೈತರಿಗೆ ಪರಿಚಯ ಮಾಡಿಕೊಡುವುದಕ್ಕಾಗಿ ಉನ್ನತ ತಂತ್ರಜ್ಞಾನ ಅಳವಡಿಸಿಕೊಂಡಿರುವ ಫಾರ್ಮ್‌ಗಳಿಗೆ ಮತ್ತು ಸಂಶೋಧನಾ ಕೇಂದ್ರಗಳಿಗೆ ಭೇಟಿ ನೀಡುವುದಕ್ಕೆ ಒತ್ತುಕೊಟ್ಟು "ಭಾರತ ದರ್ಶನ" ಕಾರ್ಯಕ್ರಮವನ್ನು ಮುಂದುವರಿಸಲಾಗಿದೆ.

32. ಕೃಷಿ ಮತ್ತು ತೋಟಗಾರಿಕೆ ಬೆಳೆಗಳನ್ನು ಬೆಳೆಯುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಹೇರಳವಾದ ಅವಕಾಶವಿರುವುದನ್ನು ಗಮನದಲ್ಲಿಟ್ಟುಕೊಂಡು ಆಹಾರ ಸಂಸ್ಕರಣಾ ಕೈಗಾರಿಕೆಗಳ ಸ್ಥಾಪನೆಗಾಗಿಯೇ ಒಂದು ನಿರ್ದಿಷ್ಟ ಕಾರ್ಯನೀತಿಯನ್ನು ಮತ್ತು ಅನೇಕ ಪ್ರೋತ್ಸಾಹಗಳು ಹಾಗೂ ರಿಯಾಯಿತಿಗಳನ್ನು ರೂಪಿಸಲಾಗುತ್ತಿದೆ. ಈ ವಿಷಯ ಕುರಿತಂತೆ ಒಂದು ಹೊಸ ನೀತಿ ರೂಪುಗೊಳ್ಳುತ್ತಾ ಇದೆ. ಇದರಿಂದ ಬೆಳೆಗಾರರಿಗೆ ಸಾಕಷ್ಟು ಮತ್ತು ಆದಷ್ಟೂ ಸ್ಥಿರವಾದ ಪ್ರತಿಫಲ ಖಾತರಿಯಾಗಿ ದೊರೆತು ತುಂಬಾ ಪ್ರಯೋಜನವಾಗುವುದಲ್ಲದೆ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಮೌಲ್ಯವರ್ಧನೆಯಾಗುತ್ತದೆ.

33. ರಾಜ್ಯದ ಉತ್ತರ ಭಾಗಗಳಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆಗೆ ಉತ್ತೇಜನ ನೀಡಲು ಸಹಕಾರ ವಲಯದಲ್ಲಿ ಹತ್ತು ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಷೇರು ಬಂಡವಾಳದಲ್ಲಿ ರಾಜ್ಯದ ಪಾಲಾದ 163 ಕೋಟಿ ರೂಪಾಯಿಗಳನ್ನು ಹೂಡುವ ಬಗ್ಗೆ ಎನ್.ಸಿ.ಡಿ.ಸಿ.ಯಿಂದ ನೆರವನ್ನು ಪಡೆಯಲು ಯಶಸ್ವಿ ಮಾತುಕತೆ ನಡೆಸಲಾಗಿದೆ. ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿರುವ ಈ ಕಾರ್ಖಾನೆಗಳಲ್ಲಿ 11 ಮೆಗಾವಾಟ್ ವಿದ್ಯುಚ್ಛಕ್ತಿ ಉತ್ಪಾದಿಸುವ ಸಹ-ಉತ್ಪಾದನಾ ಘಟಕಗಳು ಸಹಾ ಇರುತ್ತವೆ.

34. ತೋಟಗಾರಿಕಾ ಉತ್ಪನ್ನಗಳ ಮಾರಾಟದ ವ್ಯವಸ್ಥೆಗಾಗಿ ಒಂದು ಸಮಗ್ರ ಯೋಜನೆಯನ್ನು, ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳಿಯು, ಹಣಕಾಸು ಸಂಸ್ಥೆಗಳಿಗೆ ಸಲ್ಲಿಸುವ ಉದ್ದೇಶದಿಂದ ಸಿದ್ಧಪಡಿಸಿದೆ. ರಫ್ತು ಹಾಗೂ ಸ್ಥಳೀಯ ಮಾರಾಟ ಪ್ರವರ್ಧನೆಯ ಮೂಲಕ ರಾಜ್ಯ ಹೈಟೆಕ್ ಹೂ ಬೆಳೆಗಾರರಿಗೆ ಸಹಾಯ ನೀಡುವ ನಿಟ್ಟಿನಲ್ಲಿ ನನ್ನ ಸರ್ಕಾರ, ಹೂ ಹರಾಜು ಕೇಂದ್ರವೊಂದನ್ನು ಕೃಷಿ ಉತ್ಪನ್ನ ರಫ್ತು ಅಭಿವೃದ್ಧಿ ಏಜೆನ್ಸಿಯ ನೆರವಿನೊಂದಿಗೆ ಸ್ಥಾಪಿಸುವ ಬಗ್ಗೆ ಆಲೋಚಿಸುತ್ತಿದೆ.

35. ಕರ್ನಾಟಕವು 9,236 ಮೆಟ್ರಿಕ್ ಟನ್‌ಗಳಷ್ಟು ಹಿಪ್ಪನೇರಳೆ ಕಚ್ಚಾ ರೇಷ್ಮೆಯನ್ನು ಉತ್ಪಾದಿಸುತ್ತಿದ್ದು ಇದು ರಾಷ್ಟ್ರದಲ್ಲಿನ ಒಟ್ಟು ರೇಷ್ಮೆ ಉತ್ಪನ್ನದ ಶೇಕಡಾ 65 ರಷ್ಟಾಗಿದೆ. ರೇಷ್ಮೆ ಕೃಷಿಯು ಶತಶತಮಾನಗಳಿಂದ ರಾಜ್ಯದ 3.5 ದಶಲಕ್ಷಕ್ಕೂ ಹೆಚ್ಚು ಜನರ ಪ್ರಮುಖ ಜೀವನಾಧಾರವಾಗಿದೆ. ಭಾರತದ ಮಾರುಕಟ್ಟೆಗೆ ವಿದೇಶಿ ರೇಷ್ಮೆಯು ಪ್ರವೇಶಿಸಿದ ಇತ್ತೀಚಿನ ಬೆಳವಣಿಗೆಯು ರೇಷ್ಮೆ ಕೈಗಾರಿಕೆಗೆ ಹಿಂದೆಂದೂ ಇಲ್ಲದಷ್ಟು ಗಂಭೀರ ಸವಾಲೊಡ್ಡಿದೆ. ಇದು ರೇಷ್ಮೆ ವಲಯದ ಉಳಿವಿಗೇ ಮಾರಕವಾಗಿದೆ. ಆದ್ದರಿಂದ,

ಭಾರತ ಸರ್ಕಾರವು ರೇಷ್ಮೆ ಆಮದಿಗೆ ಅನುಮತಿ ನೀಡಿ ಹೊರಡಿಸಿರುವ ಅಧಿಸೂಚನೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಪರಿಗಣಿಸಬೇಕೆಂದು ನನ್ನ ಸರ್ಕಾರವು ಆಗ್ರಹಪಡಿಸುತ್ತದೆ.

36. ಮುಂಬರುವ ವರ್ಷಗಳಲ್ಲಿ ಕರ್ನಾಟಕದ ರೇಷ್ಮೆ ವಲಯದಲ್ಲಿ ಮೂಲಭೂತ ಬದಲಾವಣೆಗಳಾಗಲಿವೆ. ಜಪಾನಿನ ಅಂತರರಾಷ್ಟ್ರೀಯ ಸಹಕಾರ ಏಜೆನ್ಸಿಯ ಸಹಯೋಗದಲ್ಲಿ ಒಂದು ಹೊಸ ಮತ್ತು ಸತ್ವಶಾಲಿ ಬೈವೋಲ್ಟೀನ್ ರೇಷ್ಮೆ ತಳಿಯನ್ನು ಬೆಳೆಗಾರರಿಗೆ ಪರಿಚಯಿಸಲಾಗಿದೆ. ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯು ಉತ್ತಮ ಗುಣಮಟ್ಟದ ನೂಲಿನ ಉತ್ಪಾದನೆ ಮಾಡುವ ಸಲುವಾಗಿ ಹೊಸ ತಳಿಯಾದ ಮಲ್ಟಿವೋಲ್ಟೀನ್ ಎಂ.ಹೆಚ್. 1ನ್ನು ಮತ್ತು ಮಲ್ಟಿ ಎಂಡ್ ರೀಲಿಂಗ್ ಯಂತ್ರಗಳನ್ನು ಹೊರತಂದಿದೆ. ಇದರಿಂದ ಉತ್ಪಾದನಾ ವೆಚ್ಚ ಬಹಳಷ್ಟು ಕಡಿಮೆಯಾಗುವುದೇ ಅಲ್ಲದೆ ರೇಷ್ಮೆಯ ಗುಣಮಟ್ಟವೂ ಹೆಚ್ಚುತ್ತದೆ.

37. ಗ್ರಾಹಕರಿಗೆ ಆರೋಗ್ಯಕರವಾದ ಮತ್ತು ಪೌಷ್ಟಿಕವಾದ ಹಾಲು ಮತ್ತು ಹಾಲು ಉತ್ಪನ್ನಗಳನ್ನು ನ್ಯಾಯಬೆಲೆಗೆ ಒದಗಿಸುವುದರ ಜೊತೆಗೆ ಹಾಲು ಉತ್ಪಾದಕರಿಗೆ ಯುಕ್ತ ಲಾಭ ದೊರೆಯುವಂತೆ ಮಾಡುವ ನಮ್ಮ ಪ್ರಯತ್ನವನ್ನು ಮುಂದುವರಿಸಿಕೊಂಡು ಬರುತ್ತಿದ್ದೇವೆ. ಇದಕ್ಕಾಗಿ ನನ್ನ ಸರ್ಕಾರವು, 50 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಒಂದು ಮೆಗಾ ಡೈರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಉದ್ದೇಶಿಸಿದೆ. ಇದು ದಿನವೊಂದಕ್ಕೆ 6 ಲಕ್ಷ ಲೀಟರಿನಷ್ಟು ಹಾಲನ್ನು ಸಂಸ್ಕರಿಸಲಿದ್ದು, ಇದರಿಂದಾಗಿ ರೈತರು ಉತ್ಪಾದಿಸಿದ ಹಾಲಿಗೆ ಕೂಡಲೇ ಮಾರುಕಟ್ಟೆ ಸಿಕ್ಕಂತಾಗುತ್ತದೆ. ಹಾಲು ಸಮೃದ್ಧಿಯ ಕಾಲದಲ್ಲಿ ಹೆಚ್ಚುವರಿ ಹಾಲಿನ ಸಮಸ್ಯೆಯನ್ನು ಪರಿಹರಿಸುವ ಸಲುವಾಗಿ 22 ಕೋಟಿ ರೂಪಾಯಿ ವೆಚ್ಚದಲ್ಲಿ 30 ಮೆಟ್ರಿಕ್ ಟನ್ ಸಾಮರ್ಥ್ಯದ ಒಂದು ಹಾಲಿನ ಪುಡಿ ಸ್ಥಾವರವನ್ನು ಸಹಾ ಸ್ಥಾಪಿಸಲಾಗುವುದು. ಇಲ್ಲಿ ಹೆಚ್ಚುವರಿ ಹಾಲನ್ನು ಪುಡಿಯಾಗಿ ಪರಿವರ್ತಿಸಿ, ಹಾಲು ಉತ್ಪಾದನೆ ಕಡಿಮೆಯಾಗುವ ಕಾಲದಲ್ಲಿ ಇದನ್ನು ಮತ್ತೆ ಹಾಲಾಗಿ ಪರಿವರ್ತಿಸಿ ವಿತರಿಸಲು ಸಂರಕ್ಷಿಸಲಾಗುವುದು.

38. ಶಿವಮೊಗ್ಗ, ಧಾರವಾಡ, ದಾವಣಗೆರೆ, ಹಾವೇರಿ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ 13.4 ಕೋಟಿ ರೂಪಾಯಿ ವೆಚ್ಚದಲ್ಲಿ ಸಮಗ್ರ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಯೋಜನೆಯನ್ನು ಎನ್. ಸಿ.ಡಿ.ಸಿ. ನೆರವಿನೊಂದಿಗೆ ಜಾರಿಗೆ ತರಲಾಗುವುದು. ಇದರಿಂದ ಸಿಹಿ ನೀರು ಸಂಪನ್ಮೂಲಗಳನ್ನು ಅಭಿವೃದ್ಧಿಗೊಳಿಸುವುದಕ್ಕೂ ಮತ್ತು ಮೀನು ಉತ್ಪಾದನೆಯನ್ನು ಹೆಚ್ಚಿಸುವುದಕ್ಕೂ ಸಹಾಯವಾಗುತ್ತದೆ.

39. ಅರ್ಥ ವ್ಯವಸ್ಥೆಯ ಭವಿಷ್ಯತ್ ಬೆಳವಣಿಗೆಗೆ ಬಂದರುಗಳಲ್ಲಿ ಮೂಲ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದೂ ಅಗತ್ಯ. ಬಂದರುಗಳ ಅಭಿವೃದ್ಧಿಗೆ ಖಾಸಗಿ ಬಂಡವಾಳ

ಹೂಡಿಕೆಯನ್ನು ಆಕರ್ಷಿಸಲು ರಾಜ್ಯ ಸರ್ಕಾರವು ತನ್ನದೇ ಆದ ಕಾರ್ಯನೀತಿಯನ್ನು ರೂಪಿಸಿದೆ. ಈ ಕಾರ್ಯನೀತಿಯನ್ನು ಆಧರಿಸಿ ತದ್ರಿ, ಬೆಳಕೇರಿ ಮತ್ತು ಹಳೆ ಮಂಗಳೂರಿನ ಬಂದರುಗಳ ಅಭಿವೃದ್ಧಿಗೆ ವಿವರವಾದ ಯೋಜನಾ ವರದಿಗಳನ್ನು ಸಲ್ಲಿಸುವುದಕ್ಕಾಗಿ ಆಯ್ದ ಏಜೆನ್ಸಿಗಳ ಪಟ್ಟಿಯನ್ನು ತಯಾರಿಸಲಾಗಿದೆ. ಕಾರವಾರ ಬಂದರಿನಲ್ಲಿ ಕಂಟೇನರ್ ಮೂಲಕ ಸರಕು ಸಾಗಿಸುವ ಸೇವೆಯನ್ನು ಸದ್ಯದಲ್ಲೇ ಪ್ರಾರಂಭಿಸಲಾಗುವುದೆಂದು ತಿಳಿಸಲು ನನಗೆ ಸಂತೋಷವಾಗಿದೆ. ಇದರಿಂದ ಈ ಬಗೆಯ ಸೇವೆಯನ್ನು ಪಡೆಯಲು ಚೆನ್ನೈ ಬಂದರನ್ನೇ ಅವಲಂಬಿಸಿರುವ ಉತ್ತರ ಭಾಗದ ಜಿಲ್ಲೆಗಳಿಗೆ ಹೆಚ್ಚಿನ ನೆರವಾಗಲಿದೆ.

40. ಕಾರವಾರದಲ್ಲಿ 'ಸೀಬರ್ಡ್' ನೌಕಾನೆಲೆಯನ್ನು 1986 ರಲ್ಲೇ ಯೋಜಿಸಿದ್ದರೂ ಇದರ ಕಾಮಗಾರಿಗಳು ನಿರೀಕ್ಷಿಸಿದಂತೆ ಮುಂದುವರಿಯಲಿಲ್ಲ. ಈ ಯೋಜನೆಯಿಂದ ಸ್ಥಳಾಂತರಗೊಳ್ಳುವ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸುವ ಬಗ್ಗೆ ನನ್ನ ಸರ್ಕಾರವು ಒಂದು ಸಮಗ್ರ ಪ್ರಸ್ತಾವವನ್ನು ಅಂತಿಮವಾಗಿ ರೂಪಿಸಿದೆ. ಈ ಪ್ರಸ್ತಾವವನ್ನು ಒಪ್ಪಿರುವ ಎಲ್ಲರಿಗೂ ನನ್ನ ಸರ್ಕಾರವು ಆಭಾರಿಯಾಗಿದೆ. ಈ ಯೋಜನೆಯ ಕಾರ್ಯವು ತ್ವರಿತಗೊಳ್ಳುವುದರಿಂದ ಆ ಪ್ರದೇಶದಲ್ಲಿನ ಆರ್ಥಿಕ ಚಟುವಟಿಕೆಗಳು ಚುರುಕುಗೊಳ್ಳುತ್ತವೆ.

41. ಆರ್ಥ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಉತ್ತಮ ರಸ್ತೆಗಳ ಮಹತ್ವವನ್ನು ಗುರುತಿಸಿ, ರಾಜ್ಯ ಹೆದ್ದಾರಿಗಳನ್ನು ಬಲಪಡಿಸುವುದಕ್ಕೆ ಮತ್ತು ಸುಸ್ಥಿತಿಯಲ್ಲಿಡುವುದಕ್ಕೆ ಸರ್ಕಾರವು ವಿಶ್ವ ಬ್ಯಾಂಕಿನಿಂದ 1200 ಕೋಟಿ ರೂಪಾಯಿ ಸಾಲದ ನೆರವನ್ನು ಕೋರಿದೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿ ಮತ್ತು ಸೇತುವೆಗಳ ನಿರ್ಮಾಣಕ್ಕಾಗಿ 350 ಕೋಟಿ ರೂ. ವೆಚ್ಚದ ಕಾರ್ಯಕ್ರಮವನ್ನು ನಬಾರ್ಡ್‌ನ ಸಾಲ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಗ್ರಾಮೀಣ ಪ್ರದೇಶಗಳಲ್ಲಿನ ರಸ್ತೆ ಸಂಪರ್ಕ ವ್ಯವಸ್ಥೆಯನ್ನು ಸುಧಾರಿಸಲು ನಬಾರ್ಡ್‌ನಿಂದ ಇನ್ನೂ 100 ಕೋಟಿ ರೂ.ಗಳ ಸಾಲದ ನೆರವನ್ನು ಕೋರಲಾಗುತ್ತಿದೆ.

42. ನನ್ನ ಸರ್ಕಾರದ ಸತತ ಪ್ರಯತ್ನಗಳಿಂದಾಗಿ ಕೇಂದ್ರವು ಈ ಮುಂದಿನ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಿರುವ ಸಂಗತಿಯನ್ನು ತಮಗೆ ತಿಳಿಸಲು ನನಗೆ ಸಂತಸವಾಗುತ್ತದೆ.

(i) ಆಂಕೋಲಾ-ಹುಬ್ಬಳ್ಳಿ-ಹೊಸಪೇಟೆ-ಗುತ್ತಿ (ಆಂಧ್ರ ಪ್ರದೇಶ)ರಸ್ತೆ.

(ii) ತುಮಕೂರು-ಹೊನ್ನಾವರ ರಸ್ತೆ.

(iii) ಮಂಗಳೂರು- ತೀರ್ಥಹಳ್ಳಿ-ಶಿವಮೊಗ್ಗ-ಚಿತ್ರದುರ್ಗ ರಸ್ತೆ.

(iv) ಬೆಂಗಳೂರಿನಿಂದ (ರಾಷ್ಟ್ರೀಯ ಹೆದ್ದಾರಿ 7 ರಿಂದ) ಕೊಳ್ಳೇಗಾಲ,

ಚಾಮರಾಜನಗರ, ಸತ್ಯಮಂಗಲ ಮೂಲಕ ತಮಿಳುನಾಡು ಗಡಿಗೆ.

(v) ಹೊಸೂರು-ಸರ್ಜಾಪುರ-ದೇವನಹಳ್ಳಿ-ದೊಡ್ಡಬಳ್ಳಾಪುರ ಮತ್ತು ನೆಲಮಂಗಲದಿಂದಾಚೆ ರಾಷ್ಟ್ರೀಯ ಹೆದ್ದಾರಿ-4ಕ್ಕೆ ಸೇರುವ ರಸ್ತೆ.

43. ನಿರ್ಮಾಣ, ಒಡೆತನ, ನಿರ್ವಹಣೆ ಮತ್ತು ವರ್ಗಾವಣೆ ಆಧಾರದ ಮೇಲೆ ಬೆಂಗಳೂರಿನಲ್ಲಿ ಸಮೂಹ ತ್ವರಿತ ಸಾರಿಗೆ ವ್ಯವಸ್ಥೆ ರೂಪಿಸುವುದಕ್ಕೆ ಸಂಬಂಧಿಸಿದಂತೆ ವಿವರವಾದ ಕಾರ್ಯಸಾಧ್ಯತಾ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ. 1999ರ ಮಧ್ಯದಲ್ಲಿ ರಿಯಾಯಿತಿ ಒಪ್ಪಂದಕ್ಕೆ ಸಹಿ ಹಾಕುವ ನಿರೀಕ್ಷೆಯಿದೆ. ಯೋಜನೆಯ ಮೊದಲ ಹಂತವನ್ನು 2000ದ ಇಸವಿಯ ಪ್ರಾರಂಭದಲ್ಲಿ ಆರಂಭಿಸುವ ನಿರೀಕ್ಷೆ ಇದೆ. ಬೆಂಗಳೂರಿನ 62 ಕಿ.ಮೀ. ಉದ್ದದ ಹೊರ ವರ್ತುಲ ರಸ್ತೆ ನಿರ್ಮಾಣ ಬಹಳ ಹಿಂದೆಯೇ ಆಗಬೇಕಾಗಿತ್ತು. ಕಾರ್ಯಗತವಾಗದೆ ಉಳಿದಿದ್ದ ಈ ಯೋಜನೆಯನ್ನು ನನ್ನ ಸರ್ಕಾರ ಕೈಗೆತ್ತಿಕೊಂಡು, ಮೈಸೂರು ರಸ್ತೆ-ಹೊಸೂರು ರಸ್ತೆ ನಡುವಿನ ಮತ್ತು ಬಳ್ಳಾರಿ ರಸ್ತೆ-ಹಳೆ ಮದ್ರಾಸ್ ರಸ್ತೆ ನಡುವಿನ 26 ಕಿ.ಮೀ. ಉದ್ದದ ರಸ್ತೆಯನ್ನು ಸಿದ್ಧಪಡಿಸಿದೆ. ಮುಂದಿನ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಹುಡ್ಕೊ ಸಂಸ್ಥೆಯು 180 ಕೋಟಿ ರೂ. ಸಾಲದ ನೆರವನ್ನು ನೀಡಿದೆ. ವಿಮಾನ ನಿಲ್ದಾಣದಿಂದ ಕೋರಮಂಗಲದವರೆಗಿನ ಮಧ್ಯ ವರ್ತುಲ ರಸ್ತೆಯು ಆದಷ್ಟು ಬೇಗನೆ ಸಂಚಾರಕ್ಕೆ ಸಿದ್ಧವಾಗುವ ನಿರೀಕ್ಷೆ ಇದೆ. 112 ಕೋಟಿ ರೂ. ಅಂದಾಜು ವೆಚ್ಚದ, ಸಿಸಿಬಿ ವೃತ್ತದಿಂದ ಪುರಭವನದವರೆಗಿನ ಫ್ಲೈಓವರ್ ಹಾಗೂ ರಿಚ್‌ಮಂಡ್ ವೃತ್ತದಲ್ಲಿನ ಫ್ಲೈಓವರ್‌ಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ. ಮೇಖ್ರಿವೃತ್ತದ ಬಳಿ 20 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಗ್ರೇಡ್ ಸೆಪರೇಟರನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಹಡ್ಸನ್ ವೃತ್ತ ಮತ್ತು ಟ್ರಿನಿಟಿ ವೃತ್ತದ ಬಳಿ ಫ್ಲೈಓವರ್‌ಗಳನ್ನು ನಿರ್ಮಿಸಲು ಪ್ರಾಥಮಿಕ ಪರಿಕಲ್ಪನಾ ವರದಿಗಳನ್ನು ಸಿದ್ಧಪಡಿಸಲಾಗಿದೆ. 155 ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರಿನ 245 ಕಿ.ಮೀ. ಉದ್ದದ ಪ್ರಮುಖ ರಸ್ತೆಗಳನ್ನು ಮತ್ತು ಒಳರಸ್ತೆಗಳನ್ನು ಪುನರ್ ನಿರ್ಮಾಣ ಮಾಡುವ ಕಾರ್ಯ ಪ್ರಗತಿಯಲ್ಲಿದೆ. ಈ ಯೋಜನೆಗಳ ಅನುಷ್ಠಾನದ ನಂತರ ಬೆಂಗಳೂರಿನ ನಾಗರಿಕರಿಗೆ ಉತ್ತಮ ರಸ್ತೆಗಳು ದೊರೆತು ಸಂಚಾರವೂ ಸುಗಮವಾಗುವುದಲ್ಲದೆ ಮಾಲಿನ್ಯವೂ ಕಡಿಮೆಯಾಗುತ್ತದೆ.

44. ಏಷಿಯಾ ಅಭಿವೃದ್ಧಿ ಬ್ಯಾಂಕಿನ ನೆರವಿನೊಂದಿಗೆ ಮಂಗಳೂರು, ಉಡುಪಿ, ಕಾರವಾರ, ಸಿಸಿಬಿ, ದಾಂಡೇಲಿ, ಭಟ್ಕಳ, ಪುತ್ತೂರು, ಅಂಕೋಲಾ, ಕುಂದಾಪುರ ಮತ್ತು ಉಳ್ಳಾಲ ಪಟ್ಟಣಗಳನ್ನು ಕರ್ನಾಟಕ ಕರಾವಳಿ ಪರಿಸರ ನಿರ್ವಹಣೆ ಮತ್ತು ನಗರಾಭಿವೃದ್ಧಿ ಯೋಜನೆ ಅಡಿಯಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. ಬ್ಯಾಂಕಿನ ವಾಸ್ತವಾಂಶ ಪರಿಶೀಲನಾ ತಂಡವು ಮುಖ್ಯಾಂಶಗಳ ದಾಖಲೆಯನ್ನು ಸಿದ್ಧಪಡಿಸಿದ್ದು,

ಅದರಲ್ಲಿ ಒಟ್ಟು 700 ಕೋಟಿ ರೂ. ವೆಚ್ಚದ ಹಲವಾರು ಉಪಯೋಜನೆಗಳ ಬಗ್ಗೆ ಪರಿಕಲ್ಪಿಸಲಾಗಿದೆ.

45. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯು ಈಗ 115 ನೀರು ಸರಬರಾಜು ಯೋಜನೆಗಳನ್ನು ಮತ್ತು 12 ಒಳಚರಂಡಿ ಯೋಜನೆಗಳನ್ನು ಕಾರ್ಯಗತಗೊಳಿಸುತ್ತಿದೆ. ಈ ಪೈಕಿ 59 ಯೋಜನೆಗಳು ಪೂರ್ಣಗೊಂಡು ಈಗಾಗಲೇ ಕಾರ್ಯಾರಂಭ ಮಾಡಿವೆ. ಈ ವರ್ಷದಲ್ಲಿ 30 ಯೋಜನೆಗಳನ್ನು ಪೂರ್ಣಗೊಳಿಸಿ ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ. ತ್ವರಿತಗತಿಯ ನಗರ ನೀರು ಪೂರೈಕೆ ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ನೆರವಿನೊಂದಿಗೆ 9 ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಪೈಕಿ 3 ಯೋಜನೆಗಳು ಪೂರ್ಣಗೊಂಡು ಕಾರ್ಯಾರಂಭ ಮಾಡಿವೆ. ಇನ್ನೂ 5 ಹೊಸ ಯೋಜನೆಗಳನ್ನು ಈ ವರ್ಷ ಕೈಗೆತ್ತಿಕೊಳ್ಳಲಾಗುವುದು.

46. ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನಸಂಖ್ಯೆಯುಳ್ಳ 38 ಮಧ್ಯಮ ಗಾತ್ರದ ನಗರಪ್ರದೇಶಗಳಿಗೆ, ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ, ಕಾರ್ಯಸಾಧ್ಯತಾ ವರದಿಗಳನ್ನು ಸಿದ್ಧಪಡಿಸಲಾಗುತ್ತಿದೆ. ಈ ಯೋಜನೆಗಳಿಗೆ ವಿಶ್ವ ಬ್ಯಾಂಕಿನ ನೆರವನ್ನು ಪಡೆಯಲು ಉದ್ದೇಶಿಸಲಾಗಿದೆ. ಹುಡ್ಕೊ ನೆರವಿನೊಂದಿಗೆ 262 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ 26 ಹೊಸ ನೀರು ಸರಬರಾಜು ಯೋಜನೆಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. 600 ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ನೀರು ಸರಬರಾಜು ಮತ್ತು ಒಳಚರಂಡಿ ಸೇವೆಯನ್ನು ಒದಗಿಸಲು ಮುನಿಸಿಪಲ್ ಅಭಿವೃದ್ಧಿ ಯೋಜನಾ ಮಿಷನ್, ವಿಶ್ವಬ್ಯಾಂಕ್ ನೆರವು ಪಡೆಯುವುದಕ್ಕಾಗಿ ಅಧ್ಯಯನ ನಡೆಸಲು 20 ನಗರ ಸ್ಥಳೀಯ ಸಂಸ್ಥೆಗಳನ್ನು ಕರ್ನಾಟಕದ ಉತ್ತರ ಭಾಗದಲ್ಲಿ ಗುರುತಿಸಿದೆ.

47. ಕಳೆದ ಕೆಲವು ವರ್ಷಗಳಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವೇ ಮೊತ್ತ ಮೊದಲ ಕಾರ್ಯಪ್ರವೃತ್ತವಾಗಿದ್ದು, ಈಗಲೂ ಆ ಕ್ಷೇತ್ರದಲ್ಲಿ ತಾನೇ ಮುಂಚೂಣಿಯಲ್ಲಿದೆ ಎಂಬುದನ್ನು ಬಹಳ ಹೆಮ್ಮೆಯಿಂದ ತಿಳಿಸಬಯಸುತ್ತೇನೆ. ಕರ್ನಾಟಕದಲ್ಲಿ ಮಾಹಿತಿ ತಂತ್ರಜ್ಞಾನ ಉದ್ಯಮಗಳ ಬೃಹತ್ ಜಾಲವಿದ್ದು, ಮಾಹಿತಿ ತಂತ್ರಜ್ಞಾನ ಸಾಫ್ಟ್‌ವೇರನ್ನು ಭಾರಿ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ. ಕರ್ನಾಟಕದ ಜನತೆ ಈ ಮಾಹಿತಿ ತಂತ್ರಜ್ಞಾನದ ಮಹತ್ವವನ್ನು ತಿಳಿದುಕೊಂಡಿದ್ದು ಈ ನವೀನ ತಂತ್ರಜ್ಞಾನ ಶತಮಾನದ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಿದ್ದಾರೆ.

48. ರಾಜ್ಯವು ವಿವಿಧ ಬಗೆಯ ಪ್ರಯತ್ನಗಳ ಮೂಲಕ ನವೀನ ಮಾಹಿತಿ ತಂತ್ರಜ್ಞಾನದ

ಶಕೆಯನ್ನು ಪ್ರವೇಶಿಸಲು ಸಜ್ಜಾಗುತ್ತಿದೆ. 1992 ರಲ್ಲಿ ಕೇವಲ 5ಕೋಟಿ ರೂ.ಗಳಷ್ಟು ಸಣ್ಣ ಪ್ರಮಾಣದಲ್ಲಿ ಸಾಫ್ಟ್‌ವೇರನ್ನು ರಫ್ತು ಮಾಡುತ್ತಿದ್ದ ಕರ್ನಾಟಕ ರಾಜ್ಯವು 1998ನೇ ವರ್ಷದಲ್ಲಿ 2,500 ಕೋಟಿ ರೂ.ಗಳ ಸಾಫ್ಟ್‌ವೇರನ್ನು ರಫ್ತು ಮಾಡುವಂಥ ಸಾಧನೆ ಮಾಡಿದೆ. ನನ್ನ ಸರ್ಕಾರದ ನಿರಂತರ ಪ್ರಯತ್ನಗಳಿಂದಾಗಿ ಭಾರತ ಮತ್ತು ಏಷ್ಯಾದ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕರ್ನಾಟಕವು ಅಗ್ರಸ್ಥಾನ ಪಡೆದಿದೆ. ಮಾಹಿತಿ ತಂತ್ರಜ್ಞಾನದ ವಲಯದಲ್ಲಿ 267ಕ್ಕೂ ಹೆಚ್ಚು ರಫ್ತು ಆಧಾರಿತ ಘಟಕಗಳನ್ನು ಹೊಂದಿರುವ ಕರ್ನಾಟಕ ರಾಜ್ಯವು, ಅದರಲ್ಲೂ ಬೆಂಗಳೂರು, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಒಂದು ಪ್ರಮುಖ ಕೇಂದ್ರವೆಂದು ವಿಶ್ವವಿಖ್ಯಾತವಾಗಿದೆ. ಅಂತರರಾಷ್ಟ್ರೀಯ ಸಮೀಕ್ಷೆಗಳು ಸಹ ಬೆಂಗಳೂರನ್ನು ಭಾರತದ ಮಾಹಿತಿ ತಂತ್ರಜ್ಞಾನದ ರಾಜಧಾನಿಯೆಂದು ಹಾಗೂ ವಿಶ್ವದ ಹತ್ತು ಪ್ರಮುಖ ತಾಂತ್ರಿಕ ನಗರಗಳಲ್ಲಿ ಒಂದೆಂದು ಗುರುತಿಸಿವೆ. 1998ರ ನವೆಂಬರ್ ಒಂದರಂದು ಉದ್ಘಾಟಿಸಲಾದ ಐ.ಟಿ.ಕಾಂ.-98 ಬೃಹತ್ ಮೇಳದ ಯಶಸ್ಸಿನಿಂದ ಕರ್ನಾಟಕವು ಐ.ಟಿ. ಪವರ್‌ಹೌಸ್ ಎಂಬ ಕೀರ್ತಿಗೆ ಪಾತ್ರವಾಯಿತು. ಈ ಮೇಳದಲ್ಲಿ 265ಕ್ಕೂ ಹೆಚ್ಚು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಕಂಪನಿಗಳು ಭಾಗವಹಿಸಿದ್ದವು. ಸುಮಾರು 3 ಲಕ್ಷಕ್ಕೂ ಹೆಚ್ಚು ಜನ ಈ ಮೇಳಕ್ಕೆ ಭೇಟಿ ನೀಡಿದ್ದರು.

49. ನನ್ನ ಸರ್ಕಾರವು ಕಳೆದ ವರ್ಷ, ಹುಬ್ಬಳ್ಳಿ, ಮಂಗಳೂರು ಮತ್ತು ಮೈಸೂರುಗಳನ್ನು ಮೂರು ಬಿಂದುಗಳಾಗಿರಿಸಿಕೊಂಡು ಸಿಲಿಕಾನ್ ತ್ರಿಕೋನವನ್ನು ಅಭಿವೃದ್ಧಿಪಡಿಸಲು ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ. 1998ರ ನವೆಂಬರ್ ಒಂದರಂದು ಮೈಸೂರು ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್ ನಿವೇಶನದಲ್ಲಿ ಭೂನೆಲೆ (ಅರ್ತ್ ಸ್ಟೇಷನ್) ಕಾರ್ಯಾರಂಭ ಮಾಡಿದ್ದು, ಹುಬ್ಬಳ್ಳಿಯ ಸಾಫ್ಟ್‌ವೇರ್ ಟೆಕ್ನಾಲಜಿ ಪಾರ್ಕ್‌ನ ಕಾರ್ಯ ಪೂರ್ಣಗೊಳ್ಳುವ ಹಂತದಲ್ಲಿದೆ. ಪ್ರಸಕ್ತ ವರ್ಷದಲ್ಲಿ 330 ಎಕರೆಯಷ್ಟು ಭೂಮಿಯನ್ನು ಹೊಸೂರು ರಸ್ತೆಯಲ್ಲಿರುವ ವಿದ್ಯುನ್ಮಾನ ನಗರಕ್ಕೆ ಸೇರಿಸಿ ಅದನ್ನು ಏಷಿಯಾದಲ್ಲಿಯೇ ಅತ್ಯಂತ ಬೃಹತ್ ಮಾಹಿತಿ ತಂತ್ರಜ್ಞಾನ ಪಾರ್ಕ್ ಆಗಿ ಮಾಡಲಾಗಿದೆ. 1999-2000ನೇ ಸಾಲಿನಲ್ಲಿ ಖಾಸಗಿ ವಲಯದಲ್ಲಿ ಒಂಬತ್ತು ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್‌ಗಳನ್ನು ಬೆಂಗಳೂರು ನಗರದಲ್ಲಿಯೂ ಮತ್ತು ಎರಡು ಬೃಹತ್ ಸಾಫ್ಟ್‌ವೇರ್ ತಂತ್ರಜ್ಞಾನ ಪಾರ್ಕ್‌ಗಳನ್ನು ಮಂಗಳೂರು ಮತ್ತು ಮೈಸೂರಿನಲ್ಲಿಯೂ ಸ್ಥಾಪಿಸುವ ನಿರೀಕ್ಷೆಯಿದೆ.

50. ವಿದ್ಯುಚ್ಛಕ್ತಿಯೇ, ಮಾಹಿತಿ ತಂತ್ರಜ್ಞಾನ ವಲಯವೂ ಸೇರಿದಂತೆ ಎಲ್ಲ ಉದ್ಯಮಗಳ ಜೀವಾಳ. 1999ರಲ್ಲಿ ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ದಾಖಲೆ ಪ್ರಮಾಣದಲ್ಲಿ ಹೆಚ್ಚಿಸಲಿರುವುದರಿಂದ ಇದು ಒಂದು ಐತಿಹಾಸಿಕ ವರ್ಷವಾಗಲಿದೆ ಎಂಬುದನ್ನು ತುಂಬ ಹೆಮ್ಮೆಯಿಂದ ತಿಳಿಸಬಯಸುತ್ತೇನೆ. ಈ ವರ್ಷ ಕರ್ನಾಟಕ

ವಿದ್ಯುತ್ ನಿಗಮವು ರಾಜ್ಯದ ಸ್ಥಾಪಿತ ಸಾಮರ್ಥ್ಯಕ್ಕೆ 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಸೇರ್ಪಡೆ ಮಾಡಲಿರುವುದರಿಂದ ಇದು ಈ ನಿಗಮದ ಪಾಲಿಗೆ ಸಾಧನೆ ಸಂತೃಪ್ತಿಗಳ ವರ್ಷವಾಗಲಿದೆ. ಈ 600 ಮೆಗಾವ್ಯಾಟ್ ವಿದ್ಯುಚ್ಛಕ್ತಿಯಲ್ಲಿ 420 ಮೆಗಾವ್ಯಾಟ್ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದಿಂದಲೂ ಮತ್ತು 180 ಮೆಗಾವ್ಯಾಟ್ ವಿದ್ಯುತ್ ಕದ್ರಾ ಹಾಗೂ ಕೊಡಸಳ್ಳಿ ಕೇಂದ್ರಗಳಿಂದಲೂ ಬರಲಿದೆ. ಕದ್ರಾ ಮತ್ತು ಕೊಡಸಳ್ಳಿ ಯೋಜನೆಗಳು 1987 ರಿಂದ ನೆನೆಗುದಿಗೆ ಬಿದ್ದಿದ್ದವು. ಎಂಬುದನ್ನು ಮಾನ್ಯ ಸದಸ್ಯರಿಗೆ ನೆನಪು ಮಾಡಿಕೊಡಬಯಸುತ್ತೇನೆ. ನನ್ನ ಸರ್ಕಾರವು, ಈ ಎರಡು ಯೋಜನೆಗಳನ್ನು ಆದ್ಯತೆಯ ಮೇಲೆ ಕೈಗೊಳ್ಳುವ ದಿಟ್ಟ ನಿರ್ಧಾರ ತೆಗೆದುಕೊಂಡಿತು. ಇದರಿಂದ, 1998ರ ನವೆಂಬರ್‌ನಲ್ಲಿ 50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಕದ್ರಾ ಘಟಕ-Iಮತ್ತು 1999ರ ಜನವರಿಯಲ್ಲಿ 50 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯದ ಕದ್ರಾ ಘಟಕ-II ಕಾರ್ಯಾರಂಭ ಮಾಡಲು ಸಾಧ್ಯವಾಯಿತೆಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ. ಕದ್ರಾ ಘಟಕ -III ಮತ್ತು ಕೊಡಸಳ್ಳಿ ಘಟಕ-II ಮತ್ತು III 1999ರ ಜುಲೈ ವೇಳೆಗೆ ಕಾರ್ಯಾರಂಭ ಮಾಡಲಿದೆ.

51. ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 5 ಮತ್ತು 6ನೆಯ ಘಟಕಗಳ ನಿರ್ಮಾಣ ಕಾರ್ಯವನ್ನು ಖಾಸಗಿ ವಲಯಕ್ಕೆ ವಹಿಸಿಕೊಡುವ ಬಗ್ಗೆ ಒಂದು ಒಡಂಬಡಿಕೆ ಮಾಡಿಕೊಳ್ಳಲಾಗಿತ್ತು. ನನ್ನ ಸರ್ಕಾರ 1995 ರಲ್ಲಿ ಒಂದು ದಿಟ್ಟ ನಿರ್ಧಾರ ಕೈಗೊಂಡು, ಸದರಿ ಕಾರ್ಯವನ್ನು ಖಾಸಗಿ ವಲಯದಿಂದ ಹಿಂತೆಗೆದುಕೊಂಡು ಸಾರ್ವಜನಿಕ ವಲಯದ ಸಂಸ್ಥೆಯಾದ ಕರ್ನಾಟಕ ವಿದ್ಯುತ್ ನಿಗಮಕ್ಕೆ ವಹಿಸಿಕೊಟ್ಟಿತು. ನಿಗದಿತ ಅವಧಿಗಿಂತ ಮುಂಚೆಯೇ 210 ಮೆಗಾವ್ಯಾಟ್ ಸಾಮರ್ಥ್ಯದ 5ನೆಯ ಘಟಕವು ಕಾರ್ಯಾರಂಭ ಮಾಡಿರುವುದರಿಂದ ನನ್ನ ಸರ್ಕಾರದ ಈ ನಿರ್ಧಾರಕ್ಕೆ ಪೂರ್ಣ ಸಮರ್ಥನೆ ದೊರೆತಿದೆ. ಹಣಕಾಸು ವ್ಯವಸ್ಥೆ ಪೂರ್ಣಗೊಂಡ 28 ತಿಂಗಳೊಳಗೇ ಈ ಘಟಕವು ಕಾರ್ಯಾರಂಭ ಮಾಡಿರುವುದು, ರಾಷ್ಟ್ರ ಮತ್ತು ರಾಜ್ಯ ಮಟ್ಟಗಳೆರಡರಲ್ಲೂ ಒಂದು ದಾಖಲೆಯಾಗಿದೆ. 210 ಮೆಗಾವ್ಯಾಟ್ ಸಾಮರ್ಥ್ಯದ 6ನೆಯ ಘಟಕವು ಸಹ 1999ರ ಮೇ ತಿಂಗಳಿನಲ್ಲಿ ಕಾರ್ಯಾರಂಭ ಮಾಡುವ ನಿರೀಕ್ಷೆ ಇದೆ. 1,545 ಕೋಟಿ ರೂಪಾಯಿವೆಚ್ಚದ ಈ ಎರಡು ಘಟಕಗಳು ನಿಗದಿತ ಅವಧಿಗೆ ಮುಂಚೆಯೇ ಕಾರ್ಯಾರಂಭ ಮಾಡಿದ್ದರಿಂದಾಗಿ ರಾಜ್ಯಕ್ಕೆ ಕೀರ್ತಿ ಲಭಿಸಿದ್ದು ಮಾತ್ರವಲ್ಲದೆ ಯೋಜನಾ ವೆಚ್ಚದಲ್ಲಿ ಬಹಳಷ್ಟು ಉಳಿತಾಯವೂ ಆಗಿದೆ.

52. ಈ ರೀತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದರಿಂದ, 12.5 ದಶಲಕ್ಷ ಯೂನಿಟ್ ಗಳಷ್ಟು ಹೆಚ್ಚಿನ ವಿದ್ಯುತ್ ಉತ್ಪಾದನೆಯಾಗಲಿದೆ. ಇದರಿಂದ ವಿದ್ಯುತ್ ಜಾಲದಲ್ಲಿ ದೊರಕುವ ವಿದ್ಯುತ್ತಿನ ಪ್ರಮಾಣ ಶೇಕಡಾ 25ರಷ್ಟು ಹೆಚ್ಚಲಿದ್ದು ರಾಜ್ಯದಲ್ಲಿನ ವಿದ್ಯುತ್ ಲಭ್ಯತೆ ಸುಧಾರಿಸಲಿದೆ.

53. ವಿದ್ಯುತ್ ವಲಯದಲ್ಲಿ ನನ್ನ ಸರ್ಕಾರದ ಈ ಸಾಧನೆಗಳಿಂದಾಗಿ 210 ಮೆಗಾವ್ಯಾಟ್ ಸಾಮರ್ಥ್ಯದ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರದ 7ನೆಯ ಘಟಕ ಮತ್ತು ಹೊಸಪೇಟೆಯಲ್ಲಿನ ವಿಜಯನಗರ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 500 ಮೆಗಾವ್ಯಾಟ್ ಸಾಮರ್ಥ್ಯದ ಘಟಕ ಸೇರಿದಂತೆ ಹಲವಾರು ಪ್ರಮುಖ ಯೋಜನೆಗಳನ್ನು ತೆಗೆದುಕೊಳ್ಳುವುದಕ್ಕೆ ನಮಗೆ ಉತ್ತೇಜನ ದೊರೆತಂತಾಗಿದೆ.

54. ಇದಲ್ಲದೆ, ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಅದ್ಯತೆ ನೀಡುವುದರ ಜೊತೆ ಜೊತೆಗೆ ವಿದ್ಯುತ್ ಜಾಲದ ಸಾಮರ್ಥ್ಯವನ್ನು ಸುಧಾರಣೆ ಮಾಡುವ ಮೂಲಕ ವಿದ್ಯುತ್ ಸಾಗಣೆ ನಷ್ಟವನ್ನು ಕಡಿಮೆ ಮಾಡುವ ಮತ್ತು ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ಒದಗಿಸುವ ಸಲುವಾಗಿ ನನ್ನ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿ ಮುಖಾಂತರ ಹಲವಾರು ನವೀನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. 1998-99 ರಲ್ಲಿ 25 ಉಪಕೇಂದ್ರಗಳ ಸಾಮರ್ಥ್ಯವನ್ನು ವರ್ಧಿಸಲಾಗಿದೆ ಹಾಗೂ 39 ಹೊಸ ಕೇಂದ್ರಗಳು ಮತ್ತು 652 ಕಿ.ಮೀ. ಉದ್ದದ ಹೊಸ ವಿದ್ಯುತ್ ಸಾಗಣೆ ಮಾರ್ಗ ಕಾರ್ಯಾರಂಭ ಮಾಡಿವೆ. 3000 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ವಿದ್ಯುತ್ ಸಾಗಣೆ ಮತ್ತು ವಿತರಣೆ ಜಾಲವನ್ನು ಮೇಲ್ದರ್ಜೆಗೇರಿಸಲು ಭವಿಷ್ಯತ್ ಯೋಜನೆಯನ್ನು ಸಿದ್ಧಪಡಿಸಲಾಗಿದೆ. 220 ಕೇಂದ್ರಗಳ ಸ್ಥಾಪನೆ, 33 ಕೆ.ವಿ. ಸಾಮರ್ಥ್ಯದ ಕೇಂದ್ರಗಳನ್ನು 110 ಕೆ.ವಿ. ಸಾಮರ್ಥ್ಯದ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸುವುದು ಮತ್ತು 1300 ಕಿ.ಮೀ. ಉದ್ದದ ಹೊಸ ವಿದ್ಯುತ್ ಸಾಗಣೆ ಲೈನ್ ಎಳೆಯುವುದು ಇವೆಲ್ಲವೂ ಈ ಯೋಜನೆಯ ಪ್ರಮುಖ ಅಂಶದಲ್ಲಿ ಸೇರುತ್ತವೆ. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ತನ್ನ ಕಾರ್ಯಕ್ರಮಗಳಿಗೆ ಸಾಕಷ್ಟು ಹಣಕಾಸು ಒದಗಿಸಲು ವಿದ್ಯುತ್ ಹಣಕಾಸು ನಿಗಮ, ಗ್ರಾಮೀಣ ವಿದ್ಯುದೀಕರಣ ನಿಗಮ ಹಾಗೂ ಹುಡ್ಕೊ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಂಡಿದೆ. ವಿದ್ಯುಚ್ಛಕ್ತಿ ಮಂಡಲಿಯೊಂದಕ್ಕೆ ಹುಡ್ಕೊ ಸಂಸ್ಥೆಯು ವಿದ್ಯುತ್ ಸಾಗಣೆ ವಲಯದಲ್ಲಿ ಹಣಕಾಸು ನೆರವು ನೀಡುತ್ತಿರುವುದು ದೇಶದಲ್ಲಿ ಇದೇ ಮೊದಲು.

55. ವಿದ್ಯುತ್ ವಲಯದ ದಕ್ಷತೆಯನ್ನು ಸುಧಾರಿಸುವ, ಅದು ಸ್ವಸಾಮರ್ಥ್ಯದಿಂದ ಕಾರ್ಯ ನಿರ್ವಹಿಸುವಂತೆ ಮಾಡುವ ಮತ್ತು ಕೃಷಿ, ಕೈಗಾರಿಕೆ ಹಾಗೂ ರಾಜ್ಯದ ಆರ್ಥ ವ್ಯವಸ್ಥೆಯ ಸರ್ವಾಂಗೀಣ ಬೆಳವಣಿಗೆಯಲ್ಲಿ ತನ್ನ ನ್ಯಾಯಯುತವಾದ ಪಾತ್ರ ವಹಿಸುವಂತೆ ಮಾಡುವ ಸಲುವಾಗಿ ವಿದ್ಯುಚ್ಛಕ್ತಿ ವಲಯದಲ್ಲಿ ಸಂಘಟನಾ ಸುಧಾರಣೆ ಮಾಡಲು ರಾಜ್ಯವು ಬದ್ಧವಾಗಿದೆ.

56. ಸರ್ಕಾರವು ಕರ್ನಾಟಕ ಮೂಲಸೌಲಭ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮವೊಂದನ್ನು ಸದ್ಯದಲ್ಲೇ ಸ್ಥಾಪಿಸುತ್ತದೆ. ಈ ನಿಗಮವು ಪ್ರಮುಖ ಕ್ಷೇತ್ರಗಳಲ್ಲಿ ಮೂಲ ಸೌಲಭ್ಯ ಯೋಜನೆಗಳಿಗೆ ಹಣಕಾಸಿನ ನೆರವು ಒದಗಿಸುತ್ತದೆ ಹಾಗೂ ಇತರೆ ಸೇವೆಗಳನ್ನು ನೀಡುತ್ತದೆ. ನಿಗಮಕ್ಕೆ ಸಂಪನ್ಮೂಲ ಸಂಗ್ರಹಿಸುವುದಕ್ಕಾಗಿ ಸರ್ಕಾರವು ಮಾರಾಟ ತೆರಿಗೆ, ಅಬಕಾರಿ ಶುಲ್ಕ, ಸ್ಟ್ಯಾಂಪ್ ಶುಲ್ಕ ಮತ್ತು ಮೋಟಾರು ವಾಹನ ತೆರಿಗೆಯ ಮೇಲೆ ಉಪಕರವನ್ನು ವಿಧಿಸಿದೆ. ಈ ನಿಗಮದ ಆರ್ಥಿಕ ತಳಹದಿಯನ್ನು ಬಲಪಡಿಸುವ ಕಾರ್ಯದಲ್ಲಿ ಭಾಗವಹಿಸುವಂತೆ ಹಣ ಒದಗಿಸುವ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ವಿದೇಶಿ ಏಜೆನ್ಸಿಗಳನ್ನು ಹಾಗೂ ಭಾರತೀಯ ಹಣಕಾಸು ಸಂಸ್ಥೆಗಳನ್ನು ನನ್ನ ಸರ್ಕಾರವು ಕೋರುತ್ತದೆ.

57. ವಿಶ್ವದಾದ್ಯಂತ ಬಂಡವಾಳ ಹೂಡಿಕೆಯಲ್ಲಿ ಹಿಂಜರಿತ ಸ್ಥಿತಿ ಇದ್ದರೂ ವಿದ್ಯುಚ್ಛಕ್ತಿ, ರಸ್ತೆಗಳು ಮುಂತಾದ ಮೂಲಸೌಲಭ್ಯಗಳಿಗೆ ನನ್ನ ಸರ್ಕಾರ ನಿರಂತರ ಒತ್ತು ಕೊಟ್ಟ ಪರಿಣಾಮವಾಗಿ, 1998ರ ಏಪ್ರಿಲ್‌ನಿಂದ ಡಿಸೆಂಬರ್ ಅವಧಿಯಲ್ಲಿ ರಾಜ್ಯಕ್ಕೆ ಗಣನೀಯ ಪ್ರಮಾಣದ ಕೈಗಾರಿಕಾ ಬಂಡವಾಳ ಹರಿದು ಬಂದಿದೆ. ರಾಜ್ಯ ಮಟ್ಟದ ಸಿಂಗಲ್ ವಿಂಡೋ ಏಜನ್ಸಿಯು ಸುಮಾರು 1,500 ಕೋಟಿ ರೂಪಾಯಿ ಹಣ ಹೂಡಿಕೆಯ 58 ಮಧ್ಯಮ ಹಾಗೂ ದೊಡ್ಡ ಪ್ರಮಾಣದ ಯೋಜನೆಗಳಿಗೆ ಅನುಮೋದನೆ ನೀಡಿದೆ. ಉನ್ನತ ಮಟ್ಟದ ಸಮಿತಿಯು 6,300 ಕೋಟಿ ರೂಪಾಯಿ ಹಣ ಹೂಡಿಕೆಯ 6 ಬೃಹತ್ ಯೋಜನೆಗಳಿಗೆ ಅನುಮೋದನೆ ನೀಡಿದೆ. ಕರ್ನಾಟಕವು ಸುಮಾರು 4,300 ಕೋಟಿ ರೂಪಾಯಿ ವಿದೇಶಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಸಮರ್ಥವಾಗಿದೆ. ಇದು 1998ರ ಏಪ್ರಿಲ್-ಸೆಪ್ಟೆಂಬರ್ ಅವಧಿಯಲ್ಲಿ ಇಡೀ ರಾಷ್ಟ್ರಕ್ಕೆ ಅನುಮೋದಿಸಿದ್ದಂಥ ಬಂಡವಾಳ ಹೂಡಿಕೆಯ ಶೇಕಡಾ 28.21 ರಷ್ಟಾಗಿದೆ. ಮಿಕ್ಕೆಲ್ಲ ರಾಜ್ಯಗಳಿಗೆ ಹೋಲಿಸಿದರೆ ಇದು ಅತ್ಯಂತ ಹೆಚ್ಚಿನ ವಿದೇಶಿ ಬಂಡವಾಳ ಹೂಡಿಕೆಯಾಗಿದೆ ಎಂದು ತಿಳಿಸಲು ನನಗೆ ಹೆಮ್ಮೆಯೆನಿಸುತ್ತದೆ.

58. ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳ ಕ್ಷೇತ್ರದಲ್ಲೂ ನಾವು ಅತ್ಯುತ್ತಮ ಸಾಧನೆ ಮಾಡಿದ್ದೇವೆ. ಸುಮಾರು 41,000 ಜನರಿಗೆ ಉದ್ಯೋಗ ಒದಗಿಸುವಂಥ 360 ಕೋಟಿ ರೂಪಾಯಿ ಬಂಡವಾಳ ಹೂಡಿಕೆಯೊಂದಿಗೆ ಎಂಟು ಸಾವಿರದ ಐದು ನೂರಾ ತೊಂಭತ್ತೊಂಭತ್ತು ಸಣ್ಣ ಪ್ರಮಾಣದ ಕೈಗಾರಿಕಾ ಘಟಕಗಳನ್ನು ನೋಂದಾಯಿಸಲಾಗಿದೆ.

59. ಕರ್ನಾಟಕದಿಂದ ಆಗುವ ರಫ್ತು ನಿರಂತರವಾಗಿ ಹೆಚ್ಚಾಗುತ್ತಿದ್ದು, ಅದು 1997-98ನೇ ಸಾಲಿನಲ್ಲಿ 8,000 ಕೋಟಿ ರೂ. ಮಟ್ಟವನ್ನು ತಲುಪಿದೆ. ರಾಜ್ಯವು ಪ್ರತ್ಯೇಕ ರಫ್ತು ಅಭಿವೃದ್ಧಿ ಪಾರ್ಕ್ ಸ್ಥಾಪಿಸುವ, ಏರ್ ಕಾರ್ಗೊ ಕಾಂಪ್ಲೆಕ್ಸ್‌ನ್ನು ಮೇಲ್ದರ್ಜೆಗೇರಿಸುವ ಹಾಗೂ ಆಧುನೀಕರಣಗೊಳಿಸುವ, ಶೀತ ಸಂಗ್ರಹಾಗಾರ ಸೌಲಭ್ಯಗಳನ್ನು ಹಾಗೂ ಎಲೆಕ್ಟ್ರಾನಿಕ್ ಡಾಟಾ ಇಂಟರ್‌ಚೇಂಜನ್ನು ಸ್ಥಾಪಿಸುವ ಮೂಲಕ ರಫ್ತು ಅಭಿವೃದ್ಧಿಯಲ್ಲಿ

ಸಕ್ರಿಯ ಪಾತ್ರ ನಿರ್ವಹಿಸಿದೆ.- ಸರ್ಕಾರವು ಒಂದು ಉನ್ನತ ಮಟ್ಟದ ರಫ್ತು ಅಭಿವೃದ್ಧಿ ಪರಿಷತ್ತನ್ನು ರಚಿಸಿದೆ. ರಾಜ್ಯದ ರಫ್ತನ್ನು ತ್ವರಿತಗೊಳಿಸುವ ಮತ್ತು ವಿಶ್ವವ್ಯಾಪಾರ ಸಂಸ್ಥೆಯೊಡನೆ ನಾವು ಮಾಡಿಕೊಂಡ ಒಪ್ಪಂದದ ಅಂಶಗಳನ್ನು ಪಾಲಿಸುವ ದೃಷ್ಟಿಯಿಂದ, ರಾಜ್ಯದಲ್ಲಿ ಬೆಳವಣಿಗೆಗೆ ಉತ್ತಮ ಅವಕಾಶ ಇರುವಂಥ ಪ್ರತಿಯೊಂದು ಕೈಗಾರಿಕಾ ಮತ್ತು ಸೇವಾ ವಲಯದಲ್ಲೂ ರಫ್ತುಯೋಜನೆ ಹಾಗೂ ಕ್ರಿಯಾ ಯೋಜನೆಗಳನ್ನು ಸಮನ್ವಯಗೊಳಿಸುವ . ಸಲುವಾಗಿ, ನಾವು ಈಗಿರುವ ಸಾಂಸ್ಥಿಕ ವ್ಯವಸ್ಥೆಯನ್ನು ಬಲಪಡಿಸಲಿದ್ದೇವೆ.

60 ನಾರ್ವೆ ದೇಶದ ನೆರವಿನೊಂದಿಗೆ, 3.8 ಕೋಟಿ ರೂಪಾಯಿ ವೆಚ್ಚದಲ್ಲಿ ಮೈಸೂರು ನಗರ ಪ್ರದೇಶದ ಸಮಗ್ರ ಜೀವಿ ಪರಿಸ್ಥಿತಿ ಮತ್ತು ಪರಿಸರ ಅಭಿವೃದ್ಧಿ ಕಾರ್ಯಕ್ರಮವೊಂದನ್ನು ಯೋಜಿಸಲಾಗಿದೆ. ಚಾಮುಂಡಿ ಬೆಟ್ಟದ ಹಾಗೂ ಅದರ ಸುತ್ತಮುತ್ತಲಿನ ನಗರ ಮತ್ತು ಗ್ರಾಮೀಣ ಪ್ರದೇಶಗಳ ಜೀವಿ ಪರಿಸ್ಥಿತಿ ಮತ್ತು ಪರಿಸರದ ಸ್ಥಿರತೆಯನ್ನು ಕಾಪಾಡಿಕೊಂಡು ಬರುವುದು ಹಾಗೂ ಆ ಬೆಟ್ಟದ ನೈಸರ್ಗಿಕ ಸೌಂದರ್ಯವನ್ನು ವರ್ಧಿಸುವ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ಬೆಂಗಳೂರು ನಗರದಲ್ಲಿರುವ ಮಡಿವಾಳ, ಹೆಬ್ಬಾಳ ಮತ್ತು ಅಗರಂ ಕೆರೆಗಳ ಸಮಗ್ರ ಅಭಿವೃದ್ಧಿಗಾಗಿ ಇಂಥದೇ ಕಾರ್ಯಕ್ರಮವೊಂದನ್ನು ನಾರ್ವೆ ದೇಶದ ನೆರವಿನೊಂದಿಗೆ 4 ಕೋಟಿ ರೂಪಾಯಿಗಳ ಅನುಮೋದಿತ ವೆಚ್ಚದಲ್ಲಿ ಜಾರಿಗೊಳಿಸಲಾಗುತ್ತಿದೆ.

61. ಜಾಗತಿಕ ಪರಂಪರೆಯ ಸ್ಥಳವಾದ ಹಂಪೆಯ ಮತ್ತು ನಯನಮನೋಹರವಾದ ಜೋಗ್ ಜಲಪಾತದ ಸಮಗ್ರ ಅಭಿವೃದ್ಧಿಗೆ ಹಣಕಾಸು ನೆರವನ್ನು ಕೋರುವುದಕ್ಕಾಗಿ, ಒಂದು ವ್ಯಾಪಕ ಕಾರ್ಯಸಾಧ್ಯತಾ ವರದಿಯನ್ನು ತಜ್ಞ ಸಲಹೆಗಾರರ ನೆರವು ಪಡೆದು ತಯಾರಿಸಲಾಗುತ್ತಿದೆ. ಭಾರತ ಸರ್ಕಾರದ ನೆರವಿನೊಂದಿಗೆ ನಿರ್ಮಿಸಲಾದ "ಸಾಂಸ್ಕೃತಿಕ ಸಮುಚ್ಚಯ" ವನ್ನು ಬಳ್ಳಾರಿಯಲ್ಲಿ ಇತ್ತೀಚೆಗೆ ಉದ್ಘಾಟಿಸಿದ ವಿಷಯವನ್ನು ತಿಳಿಸಲು ಸಹ ನನಗೆ ಸಂತೋಷವಾಗುತ್ತಿದೆ.

62. ಪ್ರತಿಷ್ಠಿತ ಸಾಂಸ್ಕೃತಿಕ ಸಮುಚ್ಚಯವಾದ "ಕನ್ನಡ ಭವನ"ವನ್ನು ಕರ್ನಾಟಕದ ಜನತೆಗೆ ಸಮರ್ಪಿಸಲಾಗಿದೆ ಎಂದು ತಿಳಿಸಲು ನಾನು ಹೆಮ್ಮೆಪಡುತ್ತೇನೆ. ವರಕವಿ ಡಾ: ದ.ರಾ. ಬೇಂದ್ರೆಯವರ 103ನೇ ಜನ್ಮದಿನದ ಅಂಗವಾಗಿ 31-1-1999 ರಂದು ಧಾರವಾಡದ ಸಾಧನಕೇರಿಯಲ್ಲಿ ಒಂದು ಸ್ಮಾರಕ ಭವನವನ್ನು ಉದ್ಘಾಟಿಸಲಾಯಿತು. ಇಂಟರ್‌ನೆಟ್ ಮೂಲಕ ಕರ್ನಾಟಕದ ಕಲೆ, ವಾಸ್ತುಶಿಲ್ಪ, ಸಂಗೀತ, ನೃತ್ಯ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಮಾಹಿತಿಯನ್ನು ಒದಗಿಸಲು ಸಹ ಕ್ರಮ ಕೈಗೊಳ್ಳಲಾಗುತ್ತಿದೆ.

63. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ಹೇಳಬಯಸುತ್ತೇನೆ. ಅಲ್ಲೊಂದು ಇಲ್ಲೊಂದು ಸಣ್ಣಪುಟ್ಟ ಘಟನೆಗಳನ್ನು ಬಿಟ್ಟರೆ ರಾಜ್ಯದಲ್ಲಿ ಈ ವರ್ಷ ಪರಿಸ್ಥಿತಿ ಶಾಂತಿಯುತವಾಗಿತ್ತು. ಬಾಬಾಬುಡನಗಿರಿಯಲ್ಲಿ ಆಚರಿಸಲಾದ ದತ್ತ ಜಯಂತಿ ಉತ್ಸವವನ್ನು ಬಹಳ ಎಚ್ಚರಿಕೆಯಿಂದ ನಿಭಾಯಿಸಲಾಯಿತು ಮತ್ತು ನನ್ನ ಸರ್ಕಾರವು ಕೈಗೊಂಡ ಕಟ್ಟುನಿಟ್ಟಿನ ಕ್ರಮಗಳಿಂದಾಗಿ ದತ್ತ ಜಯಂತಿ ಆಚರಣೆಯು ಶಾಂತಿಯುತವಾಗಿ ನೆರವೇರಿತು. ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ಮತ್ತು ಇತರ ಸ್ಥಳಗಳಲ್ಲಿ ಸ್ಫೋಟಗೊಂಡ ಕೋಮು ಗಲಭೆಯನ್ನು ದೃಢವಾಗಿ ನಿಗ್ರಹಿಸಲಾಯಿತು. ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರಲು ನನ್ನ ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ. ಅಲ್ಪಸಂಖ್ಯಾಂತರ ಹಿತಾಸಕ್ತಿಗಳನ್ನು ಸಂರಕ್ಷಿಸಲಾಗುತ್ತದೆ.

64. ಅಧೀನ ನ್ಯಾಯಾಲಯಗಳ ಕಾರ್ಯದಕ್ಷತೆಯನ್ನು ಹೆಚ್ಚಿಸುವ ದೃಷ್ಟಿಯಿಂದ, ರಾಜ್ಯದಲ್ಲಿ "ಜುಡಿಷಿಯಲ್ ಅಕಾಡೆಮಿ"ಯೊಂದನ್ನು ಸ್ಥಾಪಿಸಲು ನನ್ನ ಸರ್ಕಾರವು ಉದ್ದೇಶಿಸಿದೆ. ಅಕಾಡೆಮಿಯು ನ್ಯಾಯಿಕ ಅಧಿಕಾರಿಗಳಿಗೆ ವಿಷಯನಿಷ್ಠ ಹಾಗೂ ವಿಶೇಷ ತರಬೇತಿ ಕಾರ್ಯಕ್ರಮಗಳ ಮೂಲಕ ಹೆಚ್ಚಿನ ತಿಳಿವಳಿಕೆ ಮೂಡಿಸುವ, ವ್ಯವಸ್ಥಾಪನಾ ನೈಪುಣ್ಯಗಳಿಸಿಕೊಡುವ ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಗ್ರಹಿಸುವಂತೆ ಮಾಡುವ ಉದ್ದೇಶ ಹೊಂದಿದೆ. ಹೊಸದಾಗಿ ಸೇವೆಗೆ ಸೇರಿದ ಹಾಗೂ ಸೇವೆಯಲ್ಲಿರುವ ಅಧಿಕಾರಿಗಳಿಗೆ, ನ್ಯಾಯನೀಡಿಕೆ ಕಾರ್ಯವನ್ನು ಉತ್ತಮವಾಗಿ ನಿರ್ವಹಿಸುವ ಬಗ್ಗೆ ತರಬೇತಿ ನೀಡಲಾಗುವುದು.

65. ನನ್ನ ಭಾಷಣದಲ್ಲಿ ಕೆಲವು ವಿಷಯಗಳ ಬಗ್ಗೆ ಮಾತ್ರ ಪ್ರಸ್ತಾಪಿಸಿದ್ದೇನೆ. ಸಾಮಾಜಿಕ ನ್ಯಾಯದೊಂದಿಗೆ ಆರ್ಥಿಕ ಬೆಳವಣಿಗೆಯಾಗುವಂತೆ ನೋಡಿಕೊಳ್ಳಲು ನನ್ನ ಸರ್ಕಾರವು ಜಾರಿಗೊಳಿಸುತ್ತಿರುವ ಇತರ ಅನೇಕ ಕಾರ್ಯಕ್ರಮಗಳ ಬಗ್ಗೆ ಸದಸ್ಯರು ಚರ್ಚಿಸುತ್ತಾರೆಂಬ ನಂಬಿಕೆ ನನಗಿದೆ. ಆರ್ಥಿಕ ಬೆಳವಣಿಗೆಯಾಗಿಬೇಕಾದರೆ ಸಾಮಾಜಿಕ ಸಾಮರಸ್ಯ ಅತ್ಯಗತ್ಯ. ಸಾಮಾಜಿಕ ನ್ಯಾಯ ಸಿಗಬೇಕಾದರೆ ಸಮಾಜದ ಪ್ರತಿಯೊಂದು ವರ್ಗಕ್ಕೂ ಈ ಬೆಳವಣಿಗೆಯ ಫಲ ದೊರಕಬೇಕು. ನಮ್ಮ ಸಮಾಜದಲ್ಲಿ ವಿವಿಧ ಭಾಷೆಗಳನ್ನಾಡುವ, ವಿವಿಧ ಧರ್ಮಗಳಿಗೆ ಸೇರಿದ ಮತ್ತು ವಿವಿಧ ಸಂಪ್ರದಾಯಗಳನ್ನು ಅನುಸರಿಸುವಂಥ ಜನಗಳಿದ್ದರೂ ಸಹ ಸಹಿಷ್ಣುತೆ, ಪರಸ್ಪರ ಗೌರವ ಮತ್ತು ಸಹಕಾರದ ಮೌಲ್ಯಗಳಲ್ಲಿ ನಾವು ದೃಢ ವಿಶ್ವಾಸವನ್ನು ಇಟ್ಟಿದ್ದೇವೆ ಎಂಬ ಅಂಶವನ್ನು ನಾನು ಒತ್ತಿ ಹೇಳಬಯಸುತ್ತೇನೆ. ಈ ವೈವಿದ್ಯಮಯ ಸಂಸ್ಕೃತಿಯೇ ನಮ್ಮ ಅಂತಃಶಕ್ತಿಯಾಗಿದೆ. ಈ ದೃಢನಂಬಿಕೆಯಿಂದಲೇ ನನ್ನ ಸರ್ಕಾರವು ಈ ನಮ್ಮ ಮಹಾನ್ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿ ಬೆಳೆಸುವುದಕ್ಕಾಗಿ ಕೋಮು ಸೌಹಾರ್ದ ಕುರಿತಂತೆ ಸದ್ಯದಲ್ಲಿ ಒಂದು ರಾಷ್ಟ್ರಮಟ್ಟದ ವಿಚಾರಗೋಷ್ಠಿಯನ್ನು ವ್ಯವಸ್ಥೆ ಮಾಡಲು ಕ್ರಮ ಕೈಗೊಳ್ಳಲಿದೆ.

66. 1991 ರಿಂದ ಈ ರಾಜ್ಯದಲ್ಲಿ ನಾನು ಕಳೆದ ದಿನಗಳು ನನ್ನ ಮನದಲ್ಲಿ ಅಚ್ಚ ಹಸಿರಾಗಿ ಉಳಿದಿವೆ. ಕರ್ನಾಟಕದ ಜನತೆ ನನಗೆ ತೋರಿದ ಪ್ರೀತಿ, ವಿಶ್ವಾಸಗಳಿಂದ ನನ್ನ ಹೃದಯ ತುಂಬಿ ಬಂದಿದೆ. ವಿವಿಧ ಬಗೆಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಂದ ಶ್ರೀಮಂತವಾಗಿರುವ, ಸ್ಥಳೀಯ ಸಂಪ್ರದಾಯಗಳಿಂದ ಮತ್ತು ಸಂಸ್ಕೃತಿಗಳಿಂದ ಸಂಪನ್ನವಾಗಿರುವ, ಭವ್ಯವಾದ, ಮನೋಹರವಾದ ಮತ್ತು ಸುಂದರವಾದ ಈ ರಾಜ್ಯದಲ್ಲಿ ಸಂಚರಿಸುವಾಗಲೆಲ್ಲ ನಾನು ಉಲ್ಲಸಿತನಾಗಿದ್ದೇನೆ. ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡುವುದು ನನಗೆ ಸಂತಸ ಮತ್ತು ಸಮಾಧಾನ ತಂದಿದೆ. ಈ ರಾಜ್ಯದ ಶ್ರದ್ಧಾನಿಷ್ಠ, ಪ್ರತಿಭಾವಂತ ಹಾಗೂ ಪ್ರಜ್ಞಾವಂತ ಜನತೆಗೆ ಈ ಸದನದ ಮಾನ್ಯ ಸದಸ್ಯರ ಮೂಲಕ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ.

67. ಉಭಯ ಸದನಗಳಲ್ಲಿ ಮಾನ್ಯ ಸದಸ್ಯರುಗಳು ನಡೆಸುವಂಥ ಚರ್ಚೆಗಳು ಫಲಪ್ರದವಾಗಲೆಂದು ಹಾರೈಸುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

ಜೈ ಕರ್ನಾಟಕ, ಜೈ ಹಿಂದ್,

(3) ಸಂತಾಪ ಸೂಚನೆ :

ಉಪಾಧ್ಯಕ್ಷರಾಗಿದ್ದ ಶ್ರೀ ಚಂದ್ರಶೇಖರ ಎಂ. ಮಾಮನಿ ಅವರ ನಿಧನದ ಬಗ್ಗೆ.

ಸಭಾಧ್ಯಕ್ಷರು:

ಈ ಸದನದ ಉಪಾಧ್ಯಕ್ಷರಾಗಿದ್ದ, ನನ್ನ ಆತ್ಮೀಯ ಸ್ನೇಹಿತರೂ ಆಗಿದ್ದ, ಬೆಳಗಾವಿ ಜಿಲ್ಲೆಯ ಭಾಗದಲ್ಲಿ ತುಂಬಾ ಜನಪ್ರಿಯ ಹಾಗೂ ಸಭ್ಯ ರಾಜಕಾರಣಿ ಎಂದು ಹೆಸರು ಗಳಿಸಿದ್ದ ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿಯವರ ಅನಿರೀಕ್ಷಿತ ಹಾಗೂ ಅಕಾಲಿಕ ಮರಣ ಈ ಸದನಕ್ಕೆ, ರಾಜ್ಯಕ್ಕೆ ಹಾಗೂ ವೈಯಕ್ತಿಕವಾಗಿ ನನಗೆ ತುಂಬಾ ಕಷ್ಟವನ್ನುಂಟು ಮಾಡಿದೆ.

ಒಬ್ಬ ಪ್ರಾಮಾಣಿಕ ವ್ಯಕ್ತಿಯಾಗಿ, ಶಾಸಕರಾಗಿ 8-7-1996 ರಿಂದ ವಿಧಾನ ಸಭಾ ಉಪಾಧ್ಯಕ್ಷರಾಗಿ ಅವರು ಮಾಡಿರುವ ಸೇವೆ ಅನುಪಮ, ಅಪಾರ ಮತ್ತು ಅಗಾಧವಾದದ್ದು. ಸದನದಲ್ಲಿ ಆಳುವ ಪಕ್ಷ ಹಾಗೂ ವಿರೋಧ ಪಕ್ಷದ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸದನದ ಘನತೆ, ಗೌರವಗಳಿಗೆ ಕುಂದುಂಟಾಗದಂತೆ ನಿಯಮಾನುಸಾರ ಸದನವನ್ನು ನಡೆಸುವಲ್ಲಿ ನನ್ನೊಂದಿಗೆ ಸಹಕರಿಸುತ್ತಿದ್ದ ಶ್ರೀ ಮಾಮನಿಯವರು ದಿನಾಂಕ 14-1-1999 ರಂದು ನಿಧನರಾದರು.